# ಮಹಾವೀರ ವಾಣಿ

ಶ್ರೀಮತಿ ವಿಮಲ ಸುಮತಿ ಕುಮಾರ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಮಹಾವೀರ ವಾಣಿ

ಪ್ರಧಾನ ಸಂಪಾದಕರು
**ಪ್ರೊ|| ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಂಪಾದಕರು
**ಡಾ| ಎಂ.ಎ. ಜಯಚಂದ್ರ**

ಲೇಖಕರು
**ಶ್ರೀಮತಿ ವಿಮಲ ಸುಮತಿಕುಮಾರ್**

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಮಹಾವೀರ ವಾಣಿ

ಲೇಖಕಿ : ಶ್ರೀಮತಿ ವಿಮಲ ಸುಮತಿಕುಮಾರ್, ಬೆಂಗಳೂರು

ಮೊದಲ ಮುದ್ರಣ : ೨೦೦೫

ಪುಟಗಳು : xii + 40

ಪ್ರತಿಗಳು : ೨೦೦೦

© ಲೇಖಕರದು

ISBN : 81-7713-187-7

ಬೆಲೆ ರೂ. ೧೦.೦೦

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ
ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

೧. ಡಾ|| ಎಂ.ಎ. ಜಯಚಂದ್ರ, ಅಧ್ಯಕ್ಷರು
೨. ಶ್ರೀ ಎಸ್.ಎನ್. ಅಶೋಕ್‌ಕುಮಾರ್, ಸದಸ್ಯರು
೩. ಶ್ರೀ ನಾಗರಾಜ್ ಪೂವಣ್ಣ, ಸದಸ್ಯರು
೪. ಶ್ರೀ ಎ.ಪಿ. ಕುಮಾರ್ ಜೈನ್, ಸದಸ್ಯರು
೫. ಶ್ರೀ ಮಲ್ಲಿನಾಥ ಪಾಟೀಲ್, ಸದಸ್ಯರು
೬. ಶ್ರೀಮತಿ ವಿಮಲ ಸುಮತಿಕುಮಾರ್, ಸದಸ್ಯರು
೭. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಚಾಲಕರು
೮. ಶ್ರೀ ಡಿ. ಸುರೇಂದ್ರ ಕುಮಾರ್, ವಿಶೇಷ ಆಹ್ವಾನಿತರು

ಪ್ರಕಾಶಕರು :
ಎನ್. ತಿಪ್ಪೇಸ್ವಾಮಿ
ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಮುದ್ರಕರು
ಶ್ರೀ ವೆಂಕಟೇಶ್ವರ ಪ್ರಿಂಟರ್ಸ್
ಗವೀಪುರ ಗುಟ್ಟಹಳ್ಳಿ, ಕೆ.ಜಿ. ನಗರ, ಬೆಂಗಳೂರು-19
ದೂರವಾಣಿ : 26677556

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಒಂದು ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲಾ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನ ಶಕ್ತಿ $2 \times 2 = 4$ ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ

ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು ; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ - ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು; ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ, ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ

ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ, ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅಪಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲಾ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ನ ಖಚಿತ ವಿಷಯ ಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತನಾಡುವ ಮಹಾಂತನ
ಕಂಡು ಬಲ್ಲವರಾರಯ್ಯ

ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಈ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿವ್ಯಕ್ತಿಯಲ್ಲಿ ನೆಲೆ ನಿಲ್ಲುವುದಲ್ಲ,

ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದವಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ - ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು, ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಜೈನಧರ್ಮಕ್ಕೆ ಐದುಸಾವಿರ ವರ್ಷಗಳ ಪ್ರಾಚೀನ ಇತಿಹಾಸವಿದೆ. ತಾನು ಬೋಧಿಸಿದ ಅಹಿಂಸೆ ಅಪರಿಗ್ರಹನೀತಿ ಸಮ್ಯಕ್‌ತತ್ವ ಹಾಗೂ ಅನೇಕಾಂತವಾದಗಳ ಪ್ರತಿಪಾದನೆಯ ಮುಖೇನ ಈ ನೆಲದ ಜೀವನಗತಿಯ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿದ ಧರ್ಮವಿದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಜೈನಧರ್ಮದ ಪ್ರಭಾವ ಪ್ರೇರಣೆಗಳು ನಖಮಾಂಸಭಾವದ ನೆಲೆಯವು. ಕನ್ನಡ ನೆಲದಲ್ಲಿ ನಡೆದ ಹಲವು ಧಾರ್ಮಿಕ ಸಂಘರ್ಷಗಳ ಮುಖಾಮುಖಿತ್ವದಲ್ಲಿ ಜೈನಧರ್ಮದ ಏಳುಬೀಳುಗಳು ಕನ್ನಡ ಸಂಸ್ಕೃತಿಯ ಜೀವನೇತಿಹಾಸವನ್ನು ಪ್ರತಿಬಿಂಬಿಸುವುದೇ ಆಗಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ ಮಹೋತ್ಸವದ ಅಂಗವಾಗಿ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವು ವಿಚಾರಗಳ ಪುಸ್ತಿಕೆಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಸಮಣಸುತ್ತಂ, ಅನೇಕಾಂತವಾದ,

ಅಹಿಂಸೆ, ಹೇಮಚಂದ್ರ, ಮಹಾವೀರವಾಣಿ, ಸಾಮ್ರಾಟ್ ಶ್ರೇಣಿಕ ಬಿಂಬಸಾರ, ಮಹಾಪುರಾಣ, ಕುಂದಾಕುಂದಾಚಾರ್ಯ, ಚಂದನಾಂಬಿಕೆ - ಇವೇ ಈ ಪುಸ್ತಿಕೆಗಳು. ಧಾರ್ಮಿಕ ವಿಚಾರಗಳು ಕೇವಲ ಪಂಡಿತಮಾನ್ಯರ ಜಿಜ್ಞಾಸೆಯ ವಿಚಾರಗಳಾಗಿ ಮಾತ್ರ ಉಳಿಯದೆ ಶ್ರೀಸಾಮಾನ್ಯರ ಅರಿವಿಗೆ ಅನ್ನವಾಗಬೇಕು ಎಂಬುದು ಇಂಥ ಪ್ರಕಟಣೆಯ ಹಿಂದಿನ ಉದ್ದೇಶ.

ಭಗವಾನ್ ಮಹಾವೀರರ ೨೬೦೦ ನೆಯ ಜನ್ಮಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಪೇಕ್ಷೆಗೆ ಅನುಸಾರವಾಗಿ ಈ ಪ್ರಕಟಣಾಕಾರ್ಯ ನಡೆಯುತ್ತಿದೆ. ಸಂಪಾದಕ ಮಂಡಳಿಯವರು ವಿಷಯಗಳ ಆಯ್ಕೆ ಮಾಡಿ, ವಿಷಯತಜ್ಞರಿಂದ ಬರೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಪ್ರಧಾನ ಸಂಪಾದಕರಾಗಿ ಡಾ|| ಎಂ.ಎ. ಜಯಚಂದ್ರ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ : ೮-೯-೨೦೦೫ — ಪ್ರೊ|| ಎಸ್.ಜಿ. ಸಿದ್ಧರಾಮಯ್ಯ

ಸ್ಥಳ : ಬೆಂಗಳೂರು — ಅಧ್ಯಕ್ಷರು

# ಮುನ್ನುಡಿ

ಭಗವಾನ್ ಮಹಾವೀರರು ಇಂದಿನ ಬಿಹಾರ ರಾಜ್ಯದ ವೈಶಾಲಿನಗರದ ಕ್ಷತ್ರಿಯ ಕುಂಡಗ್ರಾಮದಲ್ಲಿ ಕ್ರಿ.ಪೂ. ೫೯೯ರಲ್ಲಿ ಜನಿಸಿದರು. ಅವರ ತಂದೆ ಸಿದ್ಧಾರ್ಥ ಮಹಾರಾಜ, ತಾಯಿ ಪ್ರಿಯಕಾರಿಣಿದೇವಿ (ತ್ರಿಶಲಾ ದೇವಿ). ತಮ್ಮ ಮುವತ್ತನೇ ವಯಸ್ಸಿನಲ್ಲಿ ಸಂಸಾರವನ್ನು ತೊರೆದು ದೀಕ್ಷಿತರಾದರು. ಹನ್ನೆರಡು ವರ್ಷಕಾಲ ತಪಸ್ಸು ಮಾಡಿ ಕೇವಲಜ್ಞಾನಿಯಾದವರು. ಅನಂತರ ಮೂರು ದಶಕಗಳ ಕಾಲ ವಿಹಾರಗೈದು ಬೃಹತ್ ಪ್ರಮಾಣದಲ್ಲಿ ಧರ್ಮೋಪದೇಶ ನೀಡಿ, 'ಪಾವಾ' ಎಂಬ ಸ್ಥಳದಲ್ಲಿ ಕ್ರಿ.ಪೂ. ೫೨೭ರಲ್ಲಿ ನಿರ್ವಾಣ ಹೊಂದಿದರು.

ಅವರು ಅಂದಿನ ಜನಭಾಷೆಯಾದ ಪ್ರಾಕೃತದಲ್ಲಿ ಬೋಧನೆ ಮಾಡಿದರು. ಆಚಾರಾಂಗ, ಉತ್ತರಾಧ್ಯಯನ ಸೂತ್ರ, ಮೂಲಾರಾಧನಾ, ಸಮಯಸಾರ, ಪ್ರವಚನಸಾರ, ಕಾರ್ತಿಕೇಯಾನುಪ್ರೇಕ್ಷೆ, ಸಮಣಸುತ್ತಂ - ಮೊದಲಾದ ಪ್ರಾಚೀನ ಪ್ರಾಕೃತ ಗ್ರಂಥಗಳನ್ನು ಆಧರಿಸಿ, ಜೈನಧರ್ಮದ ಸಾರವನ್ನು ತಿಳಿಸುವ ತೀರ್ಥಂಕರ ಮಹಾವೀರರ ಉಪದೇಶವನ್ನು ಗದ್ಯದಲ್ಲಿ ಈ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ.

ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರೂ, ಸನ್ಮಾನ್ಯ ಗೃಹಸಚಿವರೂ ಆದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಭಗವಾನ್ ಮಹಾವೀರರ ಅಹಿಂಸಾದಿ ತತ್ತ್ವಗಳನ್ನು ಜನಸಾಮಾನ್ಯರಿಗೆ ಮುಟ್ಟಿಸಿ ಪ್ರಚುರ ಪಡಿಸಬೇಕು ಎಂಬ ಆಶಯವನ್ನು ವ್ಯಕ್ತ ಪಡಿಸಿದರು. ಇದಕ್ಕನುಸಾರವಾಗಿ 'ಮಹಾವೀರ ವಾಣಿ' ಎಂಬ ಕಿರು ಪುಸ್ತಕವನ್ನು ಪ್ರಕಟಿಸಲು ಪ್ರಕಟಣಾ ಸಮಿತಿ ತೀರ್ಮಾನಿಸಿತು.

ಶ್ರೀಮತಿ ವಿಮಲಾ ಸುಮತಿ ಕುಮಾರ್ ಅವರು ಪ್ರಭಾವೀ ಭಾಷಣಕಾರರು. ಗಮಕ, ಸಂಗೀತ, ನೃತ್ಯ, ಸಾಹಿತ್ಯದ ವಿಶೇಷ ಪರಿಚಯವುಳ್ಳವರು. ಅನೇಕ ಜೈನ ಗ್ರಂಥಗಳನ್ನು ವಾಚಿಸಿ, ಪ್ರವಚನ ನೀಡಿದ್ದಾರೆ. ಇಂಥವರು ಸಮಿತಿಯ ಕರೆಯನ್ನು ಮನ್ನಿಸಿ ಈ ಪುಸ್ತಕವನ್ನು ಸಿದ್ಧಪಡಿಸಿ ಕೊಟ್ಟಿದ್ದಾರೆ. ಅವರಿಗೆ ಸಮಿತಿಯು ಆಭಾರಿಯಾಗಿದೆ.

ಡಾ. ಎಂ.ಎ. ಜಯಚಂದ್ರ
ಅಧ್ಯಕ್ಷರು
ಭಗವಾನ್ ಮಹಾವೀರರ ೨೬೦೦ನೆಯ ಜನ್ಮ ಕಲ್ಯಾಣ
ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

# ಮಹಾವೀರ ವಾಣಿ

ಭಗವಾನ್ ಮಹಾವೀರರು ಸಮವಸರಣದಲ್ಲಿ ಗೌತಮಗಣಧರರನ್ನುದ್ದೇಶಿಸಿ "ಎಲೈ ಗೌತಮನೆ ನೀನು ಬುದ್ಧನಾಗಿ ತ್ಯಾಗಿಯಾಗಿ ಸಂಯಮಿಯಾಗಿ ಗ್ರಾಮ ನಗರಗಳಲ್ಲಿ ಸಂಚರಿಸಿ ಶಾಂತಿ ಮಾರ್ಗವನ್ನು ಬೋಧಿಸು, ಸದಾ ಎಚ್ಚರದಿಂದಿರು, ಎಂದೂ ತಪ್ಪು ಮಾಡಬೇಡ" ಎಂದು ಹೇಳಿದರು.

❖ ❖ ❖

ಮಹಾವೀರರು ಮುಂದುವರೆದು,

"ಇಂದಿನ ಪಂಚಮಕಾಲದಲ್ಲಿ ಜಿನರಿಲ್ಲ, ಜಿನಮಾರ್ಗೋಪದೇಶಕರಲ್ಲಿ ಏಕಾಭಿಪ್ರಾಯವಿಲ್ಲ ನಮಗೆ ದಾರಿಯಾವುದು ಎನ್ನುವರು. ಸರ್ವಜ್ಞನಾದ ನೀನು ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸು ತಪ್ಪುಮಾಡಬೇಡ" ಎಂದು ಆದೇಶಿಸಿದರು.

❖ ❖ ❖

ಜೈನೇತರ ಧರ್ಮಾವಲಂಬಿಗಳು ಗೌತಮ ಗಣಧರರನ್ನು ಕೇಳಿದರು,

"ಸರ್ವಜೀವ ಹಿತಕಾರಿಯಾದ ಸಮೀಕ್ಷಾಪೂರ್ವಕವಾದ ಅಸಾಧಾರಣ ಧರ್ಮವನ್ನು ಉಪದೇಶಿಸಿದ ಮಹಾವೀರನಿಗೆ ಎಂಥ ದರ್ಶನವಿತ್ತು? ಎಂಥ ಜ್ಞಾನವಿತ್ತು ? ಎಂಥ ಶೀಲವಿತ್ತು ?"

❖ ❖ ❖

ಗೌತಮ ಸ್ವಾಮಿಯು ಉತ್ತರಿಸಿದನು-

ಭಗವಾನ್ ಮಹಾವೀರನು ಕ್ಷೇತ್ರಜ್ಞ, ಕುಶಲ, ಆಶುಪ್ರಜ್ಞ, ಅನಂತಜ್ಞಾನಿ, ಅನಂತದರ್ಶಿ ಮತ್ತು ಯಶಸ್ವೀ ಉಪದೇಶಿ, ಸಾಕ್ಷಾತ್ ಅರಿಹಂತಾವಸ್ಥೆಯಿಂದ ವೀತರಾಗಿಯಾಗಿ ಉಪದೇಶಿಸಿದನು.

ಭಗವಾನ್ ಮಹಾವೀರನು ಸರ್ವದರ್ಶಿ, ಸರ್ವಜ್ಞ, ನಿಷ್ಪಾಪ, ಹುಟ್ಟುಸಾವನ್ನು ಮೆಟ್ಟಿದವನು, ವೀತರಾಗಿ ಆದರಿಂದ ಧರ್ಮವನ್ನು ಉಪದೇಶಿಸಲು ಅರ್ಹ. ಮಹಾವೀರನ ಸ್ವಾಭಾವಿಕ ಸರ್ವಾರ್ಥಗಾಮಿನೀ ಪ್ರಜ್ಞೆಯನ್ನು ಕಂಡು ವಿದ್ವಜ್ಜನರು ಸರ್ವಜ್ಞನ ಸದ್ಭಾವದ ವಿಷಯ ಗ್ರಹಿಸಿದಾಗ ನಿಸ್ಸಂದೇಹಿಗಳಾಗಿ ನಿಷ್ಪನ್ನರಾಗಿ ಬಿಡುತ್ತಿದ್ದರು. ಕೇಳಿ ಆ ಉಪದೇಶ -

❖ ❖ ❖

ಕರ್ಮಗಳ ಸಂಸರ್ಗದಿಂದ ಮೋಹಿತನಾದ ಜೀವಿಯು ದುಃಖ ಮತ್ತು ವೇದನಾಯುಕ್ತ ಜನ್ಮಗಳಲ್ಲಿ ಸಂಚರಿಸುತ್ತಾನೆ. ಒಂದೊಂದು ವೇಳೆ ಯತ್‌ಕಿಂಚಿತ್ ಸುಕೃತದಿಂದ, ಕರ್ಮಗಳ ಕ್ಷೀಣತೆಯಿಂದ ಶುದ್ಧಿಯನ್ನು ಪಡೆದು ಮನುಷ್ಯಭವವನ್ನು ಪಡೆಯುತ್ತಾನೆ.

❖ ❖ ❖

ಮನುಷ್ಯ ಭವವನ್ನು ಹೊಂದಿಯೂ ಸದ್ಧರ್ಮವನ್ನು ಕೇಳುವ, ತಿಳಿಯುವ ಅವಕಾಶ ಪಡೆಯುವುದು ದುರ್ಲಭವಾಗಿದೆ.

❖ ❖ ❖

ಸದ್ಧರ್ಮವನ್ನು ತಿಳಿಯುವುದರಿಂದ ಜೀವವು ಕ್ಷಮಾ, ಅಹಿಂಸೆ ಮತ್ತು ತಪೋಚಾರಿತ್ರವನ್ನು ಗ್ರಹಣಮಾಡುವ ಸಂಭವವಿರುತ್ತದೆ.

❖ ❖ ❖

ಜೀವನು ಮಾನವನಾಗಿ ಹುಟ್ಟಿ ಧರ್ಮದಲ್ಲಿ ಶ್ರದ್ಧೆಯನ್ನಿರಿಸಿ ಪುರುಷಾರ್ಥದ ಲಾಭವನ್ನು ಸಾಧಿಸಿ ಆತ್ಮಪ್ರವೃತ್ತನಾಗುತ್ತಾನೋ ಅವನು ಕರ್ಮರಜವನ್ನು ಕಳೆದುಕೊಳ್ಳುತ್ತಾನೆ.

❖ ❖ ❖

ಜ್ಞಾನಿಯು ರಾಗವನ್ನು ತೊರೆದು ಕರ್ಮದ ಮಧ್ಯದಲ್ಲಿದ್ದರೂ ಕೆಸರಿನಲ್ಲಿರುವ ಸುವರ್ಣದಂತೆ ತನ್ನ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುತ್ತಾನೆ.

❖ ❖ ❖

ಅಜ್ಞಾನಿಯು ಕೆಸರಿನಲ್ಲಿ ಮುಳುಗಿದ ಕಬ್ಬಿಣದಂತೆ ತನ್ನ ಸ್ವಭಾವವನ್ನು ಕಳೆದುಕೊಂಡು ಕರ್ಮರಜದಿಂದ ಆವರಿಸಲ್ಪಡುತ್ತಾನೆ.

❖ ❖ ❖

ಕರ್ಮವು ಕಳಂಕವಾಗಿದೆ. ಇದನ್ನು ದೂರಮಾಡಲು ಸರಿಯಾದ ಶ್ರದ್ಧೆ, ಜ್ಞಾನ, ಚಾರಿತ್ರಗಳೇ ಸಾಧನಗಳಾಗಿವೆ.

❖ ❖ ❖

ಧ್ಯಾನವೇ ಅಗ್ನಿ, ತಪಶ್ಚರಣವೇ ಕುಲುಮೆ, ಜೀವವೇ ಧಾತು. ಪರಮ ಯೋಗದಿಂದ ಜೀವಧಾತು ಶುದ್ಧವಾಗುತ್ತದೆ.

❖ ❖ ❖

ಪ್ರಪಂಚದ ಜೀವಜಾತರಿಗೆ ಅತ್ಯಂತ ದುರ್ಲಭವಾದ ವಿಷಯಗಳೆಂದರೆ ಮನುಷ್ಯತ್ವ, ಧರ್ಮಶ್ರವಣ, ಸರಿಯಾದ ಶ್ರದ್ಧೆ ಮತ್ತು ಪ್ರಯತ್ನಶೀಲತೆ.

❖ ❖ ❖

ಸಹಜವಾದ ಸರಳಸ್ವಭಾವದನಡೆ, ನಯ ವಿನಯದೊಡಗೂಡಿದ ನಮ್ರಭಾವ, ದಯಾಪೂರ್ಣ ಪ್ರವೃತ್ತಿ, ಕಪಟರಹಿತ ಜೀವನದಿಂದ ಮನುಷ್ಯಭವ ದೊರೆಯುತ್ತದೆ.

❖ ❖ ❖

ಪೂರ್ವ ಸಂಚಿತ ಕರ್ಮಗಳ ನಿರ್ಜರೆಗಾಗಿ ಮನುಷ್ಯಭವ ಪ್ರಾಪ್ತವಾಗುತ್ತದೆ.

❖ ❖ ❖

ಆತ್ಮ ಎಂಬುದು ರೂಪ, ರಸ, ಗಂಧ, ಸ್ಪರ್ಶರಹಿತವಾದ ಶಾಶ್ವತ ಚೈತನ್ಯವಸ್ತು. ಅದು ಅನುಭವಗಮ್ಯವೇ ಹೊರತು ವಚನಗಮ್ಯವಲ್ಲ.

❖ ❖ ❖

ಆತ್ಮನ ಸ್ವರೂಪ ಶಬ್ದಾತೀತವಾದುದು. ಅದರಿಂದ ವರ್ಣನಾತೀತ ತರ್ಕ, ವಾದ ವಿವಾದಯುಕ್ತ ಬುದ್ಧಿಗೆ ಗ್ರಹಣಾತೀತವಾದುದು.

❁ ❁ ❁

ಸ್ವಭಾವ ಸಾಮರ್ಥ್ಯ ದೃಷ್ಟಿಯಿಂದ ಆನೆ ಮತ್ತು ಇರುವೆಗಳಲ್ಲಿರುವ ಆತ್ಮಗಳಲ್ಲಿ ವ್ಯತ್ಯಾಸವಿಲ್ಲ.

❁ ❁ ❁

ಆತ್ಮನ ಸ್ವರೂಪವನ್ನು ತಿಳಿದು ಪರವಸ್ತುಗಳಿಂದ ಭಿನ್ನನೆಂದು ಪರಿಭಾವಿಸುವುದು ಆತ್ಮವಿಜಯ ಎನಿಸುತ್ತದೆ.

❁ ❁ ❁

ಬಾಹ್ಯ ಶತ್ರುಗಳನ್ನು ಜಯಿಸುವುದಕ್ಕಿಂತ ಮಿಗಿಲಾಗಿ ತನ್ನನ್ನು ತಾನು ಗೆದ್ದಾಗ ಆತ್ಮವಿಜಯಿಯಾಗುತ್ತಾನೆ.

❁ ❁ ❁

ಆತ್ಮನು ತಾನು ಮಾಡಿದ ಕರ್ಮಫಲವನ್ನು ತಾನೇ ಭೋಗಿಸುತ್ತಾನೆ. ತನ್ನ ಕರ್ಮಗಳನ್ನು ತಾನೇ ವಿಶ್ಲೇಷಿಸಲು ಸಮರ್ಥನಾಗಿದ್ದಾನೆ. ಮತ್ತು ತನ್ನ ಸ್ವಪ್ರಯತ್ನದಿಂದಲೇ ಕರ್ಮಧಾರೆಯನ್ನು ತಡೆಯಲು, ತೊಡೆದು ಹಾಕಲು ಶಕ್ತನಾಗಿದ್ದಾನೆ.

❁ ❁ ❁

ದುರ್ವಿಚಾರಗಳು ಜೀವನಿಗೆ ಮಾಡುವಷ್ಟು ಹಾನಿಯನ್ನು ಇರಿದು ಆತ್ಮಘಾತ ಮಾಡುವ ಶತ್ರುವೂ ಮಾಡಲಾರನು.

❁ ❁ ❁

ಸದಾಕಾಲ ಸಮಭಾವದಲ್ಲಿ ಚಿತ್ತವೃತ್ತಿಯನ್ನು ತೊಡಗಿಸಿರುವುದೇ ಧರ್ಮಮಾರ್ಗ.

❁ ❁ ❁

ಸದ್ಧರ್ಮ ಎಂಬ ಮಹಾನಗರವನ್ನು ಪ್ರವೇಶಿಸಲು ಕ್ಷಮೆ, ಸಂತೃಪ್ತಿ, ನಿಷ್ಕಪಟತೆ ಮತ್ತು ವಿನಮ್ರತೆ ಈ ನಾಲ್ಕು ಮಹಾದ್ವಾರಗಳಾಗಿವೆ.

❖ ❖ ❖

ಅಹಿಂಸೆ, ಸಂಯಮ ಮತ್ತು ತಪಗಳನ್ನು ಅಂಗವಾಗಿ ಪಡೆದಿರುವ ಧರ್ಮ ಉತ್ಕೃಷ್ಟ ಮಂಗಳವಸ್ತುವಾಗಿದೆ.

❖ ❖ ❖

ಯಾವ ಜೀವನು ಪ್ರಾಪಂಚಿಕವಾದ ವಿಷಯ ಭೋಗಗಳಲ್ಲಿ ಮುಳುಗಿರುವನೋ ಅವನು ಧರ್ಮದ ಸ್ವರೂಪವನ್ನು ಮತ್ತು ತನ್ನ ನಿಜ ಸ್ವರೂಪವನ್ನು ಅರಿಯಲಾರನು.

❖ ❖ ❖

ಸದ್ಧರ್ಮದ ಆಚರಣೆಯನ್ನು ಜೀವ ಏಕಾಕಿಯಾಗಿ ಏಕಾಂತದಲ್ಲಿಯೇ ಸಾಧಿಸಲು ಸಾಧ್ಯ.

❖ ❖ ❖

ಯಾವ ವ್ಯಕ್ತಿಯು ಕುಟಿಲತೆಯನ್ನು ತೊರೆದು ಆರ್ಜವ ಧರ್ಮದಲ್ಲಿ ತೊಡಗುತ್ತಾನೋ ಅವನೇ ನಿಜವಾದ ಧರ್ಮದ ಆರಾಧಕ.

❖ ❖ ❖

ಸರಳತೆಯಿಂದ ಆತ್ಮನ ಶುದ್ಧಿಯಾಗುತ್ತದೆ ಮತ್ತು ಶುದ್ಧಾತ್ಮನಲ್ಲಿ ಮಾತ್ರ ಧರ್ಮ ಸ್ಥಿರವಾಗಿ ನಿಲ್ಲುತ್ತದೆ.

❖ ❖ ❖

ಉತ್ತಮ ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ - ಇವು ಪ್ರತ್ಯೇಕ ಧರ್ಮಗಳಾಗಿರದೆ ಧರ್ಮದ ಹತ್ತು ಲಕ್ಷಣಗಳಾಗಿವೆ.

❖ ❖ ❖

ಸರಿಯಾದ ಶ್ರದ್ಧೆ ಅಥವಾ ಸಮ್ಯಗ್ದರ್ಶನ ಲೌಕಿಕ ರಾಗಾಸಕ್ತಿಯಿಂದ ಮುಕ್ತಗೊಳಿಸುತ್ತದೆ. ಇಂತಹ ಶ್ರದ್ಧೆ ಅತ್ಯಂತ ದುರ್ಲಭವಾಗಿದೆ.

❖ ❖ ❖

ಸಂಯಮ ತಪ ಮೊದಲಾದುವನ್ನು ಪಾಲಿಸುವ ಸಾಮರ್ಥ್ಯವಿದ್ದರೆ ಪಾಲಿಸು, ಇಲ್ಲದಿದ್ದರೆ ಆ ತತ್ತ್ವಗಳಲ್ಲಿ ದೃಢವಾದ ಶ್ರದ್ಧೆಯನ್ನಾದರೂ ಇಡು. ಶ್ರದ್ಧಾವಂತನಿಗೆ ಸಮ್ಯಕ್ತ್ವಪ್ರಾಪ್ತವಾಗುತ್ತದೆ.

## ಜ್ಞಾನ

ಜ್ಞಾನ ಅಸದೃಶವಾದುದು, ಜ್ಞಾನದಿಂದ ಜೀವ ಸಕಲ ವಿಚಾರವನ್ನು ತಿಳಿಯುತ್ತಾನೆ. ಜ್ಞಾನದ ಆರಾಧನೆಯಿಂದ ಅಜ್ಞಾನದ ಕ್ಷಯವಾಗುತ್ತದೆ. ಜ್ಞಾನವಿಲ್ಲದೆ ಸಂಯಮ ಅಸಂಭವವಾಗಿದೆ.

❖ ❖ ❖

ಜ್ಞಾನದ ಪ್ರಾಪ್ತಿಯಿಂದ ಜೀವ ಏಕಾಂಗಿಯಾಗಿ ಶಾಶ್ವತ ಸುಖಮಯ ಮೋಕ್ಷವನ್ನು ಪಡೆಯಲು ಸಮರ್ಥನಾಗುತ್ತಾನೆ.

❖ ❖ ❖

ಜ್ಞಾನದಿಂದ ಜೀವ ತನ್ನ ಮತ್ತು ಪರರ ಉದ್ಧಾರವನ್ನು ಮಾಡಲು ಸಮರ್ಥನಾಗುತ್ತಾನೆ.

❖ ❖ ❖

ದಾರದೊಂದಿಗಿರುವ ಸೂಜಿಯು ಕಸದ ಬುಟ್ಟಿಯಲ್ಲಿ ಬಿದ್ದರೂ ಹುಡುಕಲು ಸುಲಭವಾಗುವಂತೆ ಶಾಸ್ತ್ರಗ್ರಂಥಗಳಿಂದ ಸರಿಯಾದ ಜ್ಞಾನವನ್ನು ಪಡೆದ ಜೀವನು ಸಂಸಾರ ಸಾಗರದಲ್ಲಿ ಮುಳುಗಿಯೂ ತನ್ನನ್ನು ತಾನು ಮೇಲೆತ್ತ ಬಲ್ಲ.

❖ ❖ ❖

ಜ್ಞಾನದಿಂದಲೇ ಜನರಿಗೆ ಹೇಯ ಉಪಾದೇಯಗಳ ತಿಳುವಳಿಕೆ ಉಂಟಾಗುತ್ತದೆ. ಇಂತಹ ಜ್ಞಾನದಿಂದಲೇ ಹೇಯವಾದುದನ್ನು ಬಿಟ್ಟು ಉಪಾದೇಯವಾದುದನ್ನು ಸ್ವೀಕರಿಸಲು ಸಾಧ್ಯವಾಗುತ್ತದೆ.

❖ ❖ ❖

ಅಜ್ಞಾನವೇ ಜೀವನ ಪರಮ ಶತ್ರು. ಅಜ್ಞಾನ ಮತ್ತು ಮೋಹದಿಂದ ಜೀವನ ಎಲ್ಲ ಕಷ್ಟ ಪರಂಪರೆ ಪ್ರಾರಂಭವಾಗುತ್ತದೆ.

❖ ❖ ❖

ಹೇಗೆ ಜಾತ್ಯಂಧನು ಸೂರ್ಯೋದಯವಾದರೂ ಏನನ್ನೂ ನೋಡಲಾರನೋ ಹಾಗೆಯೇ ಅಜ್ಞಾನಿಯು ಶಾಸ್ತ್ರವಿಚಾರಗಳನ್ನು ಕೇಳಿಯೂ ಸತ್ಯಾಸತ್ಯದ ನಿರ್ಣಯ ಮಾಡಲಾರನು.

❖ ❖ ❖

ಅಜ್ಞಾನಿ ಜೀವನು ತನ್ನ ಕಾರ್ಯಗಳಿಂದ ಮುಂದೆ ಒದಗಬಹುದಾದ ದುಃಖವನ್ನು ಅರಿಯದೆ ಇಂದಿನ ಸುಖಾಭಾಸದ ತಲ್ಲೀನತೆಯಲ್ಲೇ ಮುಳುಗಿ ಯೌವನ ಮತ್ತು ಆಯುಷ್ಯಗಳ ಅಂತ್ಯದಲ್ಲಿ ಪಶ್ಚಾತ್ತಾಪದಿಂದ ಮರುಗುತ್ತಾನೆ.

❖ ❖ ❖

ಜ್ಞಾನಿಯಾದವನು ಜೀವವನ್ನು ಅರಿಯುವಂತೆಯೇ ಅಜೀವವನ್ನೂ ಅರಿಯುತ್ತಾನೆ.

❖ ❖ ❖

ಜ್ಞಾನಿಯು ಸಂಯಮದ ಅಸ್ತ್ರವನ್ನು ಬಳಸಿ ಜೀವಕ್ಕೆ ಹರಿದು ಬರುವ ಕರ್ಮಧಾರೆಯನ್ನು ತಡೆಯುತ್ತಾನೆ.

❖ ❖ ❖

ಜೀವ ಮತ್ತು ಅಜೀವಗಳ ಸ್ವರೂಪವನ್ನು ತಿಳಿದವನು ಅವೆರಡನ್ನೂ ಅರಿಯುವ ಚೇತನವಾದ ಆತ್ಮನನ್ನೂ ಸರಿಯಾದ ರೀತಿಯಲ್ಲಿ ಅರಿಯುತ್ತಾನೆ.

❖ ❖ ❖

ಜ್ಞಾನಿಯು ಸಂಯಮದಿಂದ ಹಿಂಸೆ, ಸುಳ್ಳು, ಕಳ್ಳತನ, ಭೋಗಪ್ರವೃತ್ತಿ ಮತ್ತು ಅತಿ ಆಸೆಯನ್ನು ಶಾಶ್ವತವಾಗಿ ತೊರೆಯುತ್ತಾನೆ.

❖ ❖ ❖

ಹೇಗೆ ಕೇವಲ ಭುಜಬಲದಿಂದ ಸಮುದ್ರವನ್ನು ಈಸಿ ದಾಟುವುದು ಅತ್ಯಂತ ದುಸ್ಸಾಧ್ಯವೋ ಹಾಗೆಯೇ ಕ್ರೋಧ, ಮಾನ, ಮಾಯಾ, ಲೋಭಗಳಿಂದ ಆವರಿಸಲ್ಪಟ್ಟ ಜೀವ ಸಂಯಮೀ ಜೀವನವನ್ನು ಆಚರಿಸುವುದು ಅಸಾಧ್ಯ.

❖ ❖ ❖

ಪಂಚೇಂದ್ರಿಯಗಳನ್ನು ನಿಯಂತ್ರಣಕ್ಕೊಳಪಡಿಸಿ ಅಪರಾಧಗಳೆಡೆಗೆ ಬಾಗುವ ಪ್ರವೃತ್ತಿಯನ್ನು ಧರ್ಮಪಥಕ್ಕೆ ಒಡಂಬಡಿಸಬೇಕು.

❖ ❖ ❖

ಹೇಗೆ ಆಮೆಯು ಆಪತ್ತು ಒದಗಿದಾಗ ತನ್ನ ಸರ್ವೇಂದ್ರಿಯಗಳನ್ನೂ ಕವಚದೊಳಗೆ ಸುರಕ್ಷಿತವಾಗುಳಿಸಿಕೊಳ್ಳುವುದೋ ಹಾಗೆಯೇ ಜ್ಞಾನಿಗಳು ದೌರ್ಬಲ್ಯದತ್ತ ಜಾರುವ ಚಿತ್ತವೃತ್ತಿಯನ್ನು ಆಧ್ಯಾತ್ಮಿಕ ಜ್ಞಾನದ ಕವಚದಿಂದ ಸಂರಕ್ಷಿಸಿಕೊಳ್ಳುತ್ತಾರೆ.

❖ ❖ ❖

ಮನಸ್ಸು ಎಂಬುದು ಒಂದು ದುಷ್ಟ ಭಯಂಕರ ಶಕ್ತಿಶಾಲಿ ಕುದುರೆಯಂತಿದೆ. ಇದನ್ನು ಧಾರ್ಮಿಕ ಶಿಕ್ಷಣ ರೂಪದ ಲಗಾಮಿನಿಂದ ನಿಯಂತ್ರಿಸಿ ಹತೋಟಿಯಲ್ಲಿಟ್ಟುಕೊಳ್ಳಬೇಕು.

❖ ❖ ❖

ಸಂಯಮ ಶೀಲನಾದ ಮುನಿಯು ಸಂರಂಭ, ಸಮಾರಂಭ ಮತ್ತು ಆರಂಭರೂಪಿ ಪಾಪಾಸ್ರವದಲ್ಲಿ ತೊಡಗುವ ಮನಸ್ಸನ್ನು ನಿಯಂತ್ರಿಸಬೇಕು.

❖ ❖ ❖

# ಪಂಚಾಣುವ್ರತ

ಪ್ರಪಂಚದ ಎಲ್ಲ ಪ್ರಾಣಿಗಳ ವಿಚಾರದಲ್ಲಿ ಸಮಭಾವನ್ನು ಹೊಂದಿರುವುದೇ ಅಹಿಂಸೆ.

❁ ❁ ❁

ಎಲ್ಲ ಜೀವಕೋಟಿಯನ್ನು ತನ್ನಂತೆ ಭಾವಿಸಿ ಯಾವ ಜೀವಕ್ಕೂ ಕೇಡನ್ನು ಬಯಸದಿರುವುದೇ ಅಹಿಂಸೆ. ಇದೆ ಜ್ಞಾನಿಯ ಜ್ಞಾನಾರ್ಜನೆಯ ಸಾರ್ಥಕತೆಯಾಗಿದೆ.

❁ ❁ ❁

ಪ್ರತಿಯೊಂದು ಜೀವವೂ ಬದುಕನ್ನು ಬಯಸುತ್ತದೆ. ಸಾವನ್ನು ಯಾವ ಜೀವವೂ ಬಯಸುವುದಿಲ್ಲ. ಆದರಿಂದ ಯಾವ ಜೀವವನ್ನು ಕೊಲ್ಲಬಾರದು.

❁ ❁ ❁

ಯಾವ ಪ್ರಾಣಿಗೂ ಪ್ರಿಯ ಅಥವಾ ಅಪ್ರಿಯನಾಗದೆ ಸಕಲ ಜೀವವನ್ನೂ ಸಮಭಾವದಿಂದ ನೋಡಲು ಯಾರು ಸಮರ್ಥನಾಗುವನೋ ಅವನೇ ನಿಜವಾದ ಜ್ಞಾನಿ.

❁ ❁ ❁

ಯಾರು ಮತ್ತೊಂದು ಪ್ರಾಣಿಯನ್ನು ಕೊಲ್ಲಲು, ಕೊಲ್ಲಿಸಲು, ಅಥವಾ ಕೊಲೆಗೆ ಅನುಮೋದನೆಯನ್ನು ಕೊಡುತ್ತಾರೂ ಅವರು ಪ್ರಾಪಂಚಿಕ ವೈರಭಾವನೆಯನ್ನು ಹೆಚ್ಚಿಸಿಕೊಳ್ಳುವರು.

❁ ❁ ❁

ಸದಾಕಾಲದಲ್ಲೂ ಸತ್ಯವೇ ಭಗವಂತನ ಸ್ವರೂಪವಾಗಿದೆ. ಏಕೆಂದರೆ ವಸ್ತುವಿನ ಯಥಾರ್ಥ ಸ್ವರೂಪವೇ ಸತ್ಯ ಎನಿಸಿಕೊಳ್ಳುತ್ತದೆ.

❁ ❁ ❁

ಯಾವಾಗಲೂ ಹಿತಕರವಾದ ಸತ್ಯವಚನವನ್ನೇ ನುಡಿಯಬೇಕು. ಯಾವುದೇ ಪ್ರಕಾರ ಆಘಾತವಾಗುವಂತಹ ಮಾತನ್ನು ಅದು ಸತ್ಯವೇ ಆಗಿದ್ದರೂ ಆಡಬಾರದು.

❖ ❖ ❖

ಎಲ್ಲ ಜ್ಞಾನಿಗಳು, ಸತ್ಪುರುಷರು ಅಸತ್ಯವನ್ನು ನಿಂದಿಸುತ್ತಾರೆ ಮತ್ತು ದೂರಮಾಡುತ್ತಾರೆ. ಏಕೆಂದರೆ ಸುಳ್ಳಿನಿಂದ ಅಪಯಶಸ್ಸು ಹಬ್ಬುತ್ತದೆ. ಮತ್ತು ಜೀವಿಗಳಲ್ಲಿ ಪರಸ್ಪರ ವೈರ ದ್ವೇಷಗಳು ಬೆಳೆಯುತ್ತವೆ.

❖ ❖ ❖

ಸತ್ಯದಲ್ಲಿ ಅನುರಕ್ತಿ ಇರುವ ಬುದ್ಧಿಜೀವಿಯ ಎಲ್ಲ ಪಾಪಗಳು ನಶಿಸಿಹೋಗುತ್ತವೆ.

❖ ❖ ❖

ಸತ್ಯನುಡಿಯು ಕೆಲವುವೇಳೆ ಅಪ್ರಿಯವೆನಿಸಿದರೂ ಕಹಿಯಾದ ಔಷಧಿಯು ಪರಿಣಾಮದಿಂದ ಉಪಯುಕ್ತವಾಗಿರುವಂತೆಯೇ ಸತ್ಯವಾಕ್ಯವು ಶ್ರೇಯಸ್ಕರವಾಗಿರುತ್ತದೆ.

❖ ❖ ❖

ಯಾವುದೇ ಒತ್ತಡದಿಂದ, ತನ್ನ ಸ್ವಾರ್ಥಸಾಧನೆಯಾಗುವಂತಹ ಅಥವಾ ಬೇರೆಯವರ ಮನನೋಯಿಯುವಂತಹ ಮಾತುಗಳನ್ನು ಆಡಬಾರದು.

❖ ❖ ❖

ಮುನಿಗಳು ಮತ್ತು ಆಚಾರ್ಯರು ಕೂಡ ತಮ್ಮ ಸಂಘದ ಸಾಧುಗಳೊಂದಿಗೆ ಮಾತನಾಡುವಾಗ ಹಿತಕರವಾದ ಸತ್ಯನುಡಿಯನ್ನೇ ಆಡಬೇಕು.

❖ ❖ ❖

ಪರವಸ್ತುವಿನ ವಿಷಯದಲ್ಲಿ ಇರುವ ಆಸೆಗೆ ಲೋಭ ಕಾರಣವಾಗುತ್ತದೆ. ಪರವಸ್ತುವಿನ ಬಗ್ಗೆ ಇರುವ ಆಸೆಯೇ ಕಳ್ಳತನ ಎನಿಸುತ್ತದೆ.

❖ ❖ ❖

ಪರವಸ್ತುವನ್ನು ಆದರ ಒಡೆಯನ ಅನುಮತಿ ಇಲ್ಲದೆ ತೆಗೆದು ಕೊಳ್ಳುವುದು ಕಳ್ಳತನವೇ ಆಗಿರುತ್ತದೆ.

❁ ❁ ❁

ಪರವಸ್ತುವನ್ನು ಕದಿಯುವ ವ್ಯಕ್ತಿ ಅತ್ಯಂತ ನಿರ್ದಯಿ ಮತ್ತು ಅನಂತಾನಂತ ಭವ ಬಂಧಿತನಾಗುತ್ತಾನೆ.

❁ ❁ ❁

ಪದಾರ್ಥವು ಕಡಿಮೆ ಬೆಲೆಯದಾಗಿರಲಿ ಬಹುಬೆಲೆಯದಾಗಿರಲಿ. ಧರ್ಮಮಾರ್ಗದಲ್ಲಿರುವ ಸಂಯಮಿ ಸಾಧಕನು ಅನುಮತಿ ಪಡೆಯದೆ ಅದನ್ನು ಸ್ವೀಕರಿಸುವುದಿಲ್ಲ ಅಥವಾ ಬೇರೆಯವರು ಪಡೆಯಲು ಒಪ್ಪಿಗೆ ಕೊಡುವುದಿಲ್ಲ.

❁ ❁ ❁

ಕಳ್ಳತನದಿಂದ ತಂದ ವಸ್ತುಗಳನ್ನು ಸ್ವೀಕರಿಸುವುದು ಕದ್ದು ಮುಚ್ಚಿ ಮಾಡುವ ಗುಪ್ತವ್ಯವಹಾರಗಳಲ್ಲಿ ಭಾಗವಹಿಸುವುದು, ಕಾನೂನು, ನಿಯಮ ಮತ್ತು ಸಾಮಾಜಿಕ ನೀತಿ ನಿಯಮಗಳನ್ನು ಮೀರಿನಡೆಯುವುದು ಕಳ್ಳತನಕ್ಕೆ ಸಮನಾದ ಪಾಪವಾಗಿದೆ.

❁ ❁ ❁

ಯಾವ ವ್ಯಕ್ತಿ ತನ್ನ ಭೋಗೋಪಭೋಗವಸ್ತುಗಳಿಗೆ ಪ್ರಮಾಣ ಬದ್ಧತೆಯನ್ನು ಆಚರಿಸುವುದಿಲ್ಲ ಅವನು ಅಣುವ್ರತಗಳ ಧಾರಕ ಅಥವಾ ಆರಾಧಕನಾಗುವುದು ಅಸಂಭವವಾಗುತ್ತದೆ.

❁ ❁ ❁

ಶುದ್ಧಾತ್ಮನೊಡನೆ ಲೀನವಾಗುವ ಅನುಸಂಧಾನವೇ ಬ್ರಹ್ಮಚರ್ಯ ಎನಿಸಿಕೊಳ್ಳುತ್ತದೆ ಮತ್ತು ಬ್ರಹ್ಮಚರ್ಯವೇ ತಪದ ಉತ್ಕೃಷ್ಟರೂಪವಾಗಿದೆ.

❁ ❁ ❁

# ಸಾಧು

ಯಾರು ಸಿಂಹದಂತೆ ಪರಾಕ್ರಮಿ, ಗಜದಂತೆ ಸ್ವಾಭಿಮಾನಿ, ಹರಿಣದಂತೆ ಸರಳ, ಗಾಳಿಯಂತೆ ನಿಸ್ಸಂಗ, ಸೂರ್ಯನಂತೆ ತೇಜಸ್ವಿ, ಸಾಗರದಂತೆ ಗಂಭೀರ, ಮೇರುವಿನಂತೆ ನಿಶ್ಚಲ, ಭೂಮಿಯಂತೆ ಸಹಿಷ್ಣು, ಚಂದ್ರನಂತೆ ಶೀತಲ, ರತ್ನದಂತೆ ಕಾಂತಿಯುತ, ಆಕಾಶದಂತೆ ನಿರಾವಲಂಬಿ ಯಾಗಿರುವನೋ ಅವನು ಮುನಿಯಾಗ ಬಲ್ಲನು.

❖ ❖ ❖

ನಾನು ಸಾಧು ಸಂತ ಎಂದು ಘೋಷಿಸಿಕೊಳ್ಳುವವರೆಲ್ಲ ಸಾಧುಗಳೆಂದು ನಂಬಬಾರದು. ಅಸಾಧುವಾದವನನ್ನು ಸಾಧುವೆಂದು ಭ್ರಮಿಸದೆ ನಿಜವಾದ ಸಾಧುವನ್ನು ಮಾತ್ರ ಮನ್ನಿಸಿ ಗೌರವಿಸಿ ಆರಾಧಿಸಬೇಕು.

❖ ❖ ❖

ಯಾರು ಜ್ಞಾನ ಮತ್ತು ದರ್ಶನದಿಂದ ಕೂಡಿರುವರೋ, ಯಾರು ಸಂಯಮಿಯಾಗಿ ತಪದಲ್ಲಿ ತೊಡಗಿರುವರೋ, ಯಾರು ಗುಣಸಮೂಹದಿಂದ ಕೂಡಿ ಗುಣಗಳನ್ನು ಆದರಿಸಿ ನಲಿಯುವರೊ ಅವರು ಮಾತ್ರ ಗುರುವೆನಿಸಿಕೊಳ್ಳಲು ಅರ್ಹರು.

❖ ❖ ❖

ಸಾಧು ಎನಿಸಿಕೊಳ್ಳಬೇಕಾದರೆ ಪ್ರಪಂಚದ ಸಕಲವಸ್ತು ಸಕಲಜೀವರಲ್ಲಿ ಸಮಭಾವ ಇರಬೇಕು. ಸದಾಚಾರಿ, ಸಂಯಮಶೀಲನಾಗಿರಬೇಕು. ಮುನಿ ಎನಿಸಿಕೊಳ್ಳಲು ಸಮ್ಯಕ್ ಜ್ಞಾನಿಯಾಗಿರಬೇಕು. ತಪಸ್ವಿಯೆನ್ನ ಬೇಕಾದರೆ ತಪವನ್ನು ಮಾಡುವ ಸಾಮರ್ಥ್ಯವಿರಬೇಕು.

❖ ❖ ❖

ಯಾರಿಗೆ ಈ ಕ್ಷಣಿಕ ದೇಹದಲ್ಲಿ ಮಮತೆ ಇರುವುದೋ ಯಾರಿಗೆ ಪ್ರಾಪಂಚಿಕ ಸುಖಭೋಗಗಳಲ್ಲಿ ಅಪೇಕ್ಷೆ ಇದೆಯೋ ಯಾರಿಗೆ ಆತ್ಮ ಮತ್ತು ದೇಹಗಳ ಭೇದಜ್ಞಾನ ಇರುವುದಿಲ್ಲವೋ ಅಂತಹವನ ಸಮ್ಯಕ್ ಶ್ರದ್ಧೆ ನಾಶವಾಗದೆ ಇರದು.

❖ ❖ ❖

ಪ್ರಾಪಂಚಿಕ ಒಳಿತು ಕೆಡಕುಗಳನ್ನು ಎಷ್ಟೇ ಕಂಡಿರಲಿ, ಅಭಿಮಾನ ದುರಭಿಮಾನಗಳ ಅನುಭವವಾಗಿರಲಿ, ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳದೆ ಮೌನವಾಗಿರುವವನೇ ಮುನಿ ಎನಿಸಿಕೊಳ್ಳಲು ಅರ್ಹನಾಗಿರುವನು.

❖ ❖ ❖

ಲಾಭ ನಷ್ಟಗಳಲ್ಲಿ, ಸುಖದುಃಖಗಳಲ್ಲಿ, ಸಾವು ಬದುಕಿನಲ್ಲಿ, ಹೊಗಳಿಕೆ ತೆಗಳಿಕೆಗಳಲ್ಲಿ, ಸನ್ಮಾನ ಅಪಮಾನಗಳಲ್ಲಿ, ಸಾಧುವಿಗೆ ಯಾವಾಗಲೂ ಸಮಭಾವ, ಸಮದೃಷ್ಟಿ ಇರಬೇಕು.

❖ ❖ ❖

ಯಾರಿಗೆ ಇಹಲೋಕ ಪರಲೋಕಗಳ ಬಯಕೆ ಇಲ್ಲ ಮತ್ತು ಕೆಸರು ಚಂದನಗಳಲ್ಲಿ ತಾರತಮ್ಯವಿಲ್ಲ, ಊಟ ಉಪವಾಸಗಳಲ್ಲಿ ಹಿಗ್ಗು ಕುಗ್ಗಿಲ್ಲ ಅಂತಹ ಸಾಧುವಿಗೆ ಸರಿಸಾಟಿ ಇಲ್ಲ.

❖ ❖ ❖

ಯೋಗಿಯಾದವನು ಅಶುಭ ಭಾವದಿಂದ ನೂರೆಂಟು ಬಗೆಯಲ್ಲಿ ಬಂಧವಾಗುವ ಕರ್ಮಧಾರೆಯನ್ನು ತಡೆದು ಧ್ಯಾನ ಅಧ್ಯಾತ್ಮಯೋಗದಲ್ಲಿ ಸಂಯಮವನ್ನು ಸಾಧಿಸುವನು.

❖ ❖ ❖

ಸಮಭಾವ ಸಮದೃಷ್ಟಿಯನ್ನು ಸಾಧಿಸದ ಸಾಧು ವನವಾಸದ ಏಕಾಂತದಲ್ಲಿರಲಿ, ದೇಹವನ್ನು ದಂಡಿಸಿ ತಪದಲ್ಲಿ ತೊಡಗಿರಲಿ, ಧ್ಯಾನ ಅಧ್ಯಯನ ಮೌನಗಳನ್ನು ಆಚರಿಸುತ್ತಿರಲಿ ಎಲ್ಲ ನಿರರ್ಥಕ, ನಿಷ್ಫಲ, ವ್ಯರ್ಥ.

## ಶ್ರಾವಕಾಚಾರ

ಶ್ರಾವಕಾಚಾರ ಪಾಲಿಸುವ ವ್ಯಕ್ತಿ ಮುಖ್ಯವಾದ ಐದು ಅಣುವ್ರತ ಮೂರು ಗುಣವ್ರತ ನಾಲ್ಕು ಶಿಕ್ಷಾವ್ರತಗಳನ್ನು ಪಾಲಿಸಬೇಕು.

❖ ❖ ❖

ಶ್ರಾವಕನಾದವನು ಜ್ಞಾನಿಗಳಾದ ಸಾಧು ಮುನಿಗಳ ಬಳಿ ಬಂದು ಧರ್ಮಶ್ರವಣ ಮಾಡುವನು. ಕೇಳುತ್ತಾ ಕೇಳುತ್ತಾ ಅದರಲ್ಲಿ ಆಸಕ್ತಿ ಅಭಿರುಚಿಯನ್ನು ಬೆಳೆಸಿಕೊಂಡರೆ ಶ್ರಾವಕ ಎಂಬ ಹೆಸರು ಅನ್ವರ್ಥವಾಗುವುದು.

❖ ❖ ❖

ಐದು ಔದುಂಬರ ಫಲಗಳನ್ನು (ಆಲ, ಅತ್ತಿ, ಅರಳಿ, ಎಲಚಿ, ಬಸರಿ). ತ್ಯಾಗಮಾಡಿ ಅದರ ಜೊತೆ ಏಳು ವ್ಯಸನ (ಪರಸ್ತ್ರೀ ಬಯಕೆ, ಜೂಜು, ಮದ್ಯಪಾನ, ಬೇಟೆ, ಮಾಂಸಭಕ್ಷಣ, ಹಿಂಸಾಭಾವದಿಂದ ದಂಡಿಸುವುದು, ಮರ್ಮಘಾತಕ ಮಾತುಗಳಿಂದ ತೇಜೋವಧೆ)ಗಳನ್ನು ತೊರೆದು ಸರಿಯಾದ ದೃಢ ಶ್ರದ್ಧೆಯಿಂದ ಬಾಳುವ ಶ್ರಾವಕನು ದಾರ್ಶನಿಕ ಎನಿಸಿಕೊಳ್ಳುವನು.

❖ ❖ ❖

ಹಿಂಸೆಯನ್ನು ಮಾಡುವುದು, ಸುಳ್ಳನ್ನು ಹೇಳುವುದು, ಕಳ್ಳತನ ಮಾಡುವುದು, ಅತಿ ಆಸೆಯಿಂದ ವಸ್ತುಗಳನ್ನು ಸಂಗ್ರಹಿಸುವುದು ಮತ್ತು ಅಸಂಯಮದಿಂದ ಕುಶೀಲನಾಗಿ ಬದುಕುವುದು ಐದು ಪಾಪಗಳಾಗಿವೆ. ಇವುಗಳನ್ನು ತೊರೆಯುವುದು ಅಣುವ್ರತ ಎನಿಸಿಕೊಳ್ಳುವುದು.

❖ ❖ ❖

ವಿವೇಚನೆ ಇಲ್ಲದೆ ಮಾತನಾಡುವುದು, ಬೇರೊಬ್ಬರ ಗೋಪ್ಯವನ್ನು ಬಯಲು ಮಾಡುವುದು, ಚಾಡಿಹೇಳುವುದು, ಅನಾಮಧೇಯ ಪತ್ರ ಬರೆಯುವುದು, ಸುಳ್ಳುಸುದ್ದಿಗಳನ್ನು ಹರಡುವುದು ಸತ್ಯವ್ರತದ ಅತಿಚಾರವಾಗುತ್ತದೆ.

❖ ❖ ❖

ಕದ್ದಮಾಲನ್ನು ಸ್ವೀಕರಿಸುವುದು, ಕಳ್ಳತನ ಮಾಡಲು ಪ್ರೇರೇಪಿಸುವುದು, ಕಾನೂನು ಪ್ರಕಾರ ಕೊಡಬೇಕಾದ ತೆರಿಗೆ ಶುಲ್ಕ ಇವುಗಳಿಗೆ ಮೋಸ ಮಾಡುವುದು, ಅಳತೆ ತೂಕಗಳಲ್ಲಿ ವಂಚಿಸುವುದು ಅಚೌರ್ಯವ್ರತದ ಅತಿಚಾರವಾಗುತ್ತದೆ.

❖ ❖ ❖

ಮಿತಿಮೀರಿದ ಪರಿಗ್ರಹವು ಆಸೆಯ ತಾಯಿಬೇರು. ಆಸೆಯಿಂದಾಗುವ ದೋಷಗಳಿಗೆಲ್ಲಾ ಲೋಭವೇ ಬೇರು. ಇದು ನರಕಕ್ಕೆ ಹೆದ್ದಾರಿ. ಇದನ್ನು ತಿಳಿದು ಸರ್ವವನ್ನೂ ಪರಿಮಿತಿಯಲ್ಲಿರಿಸಿಕೊಳ್ಳಬೇಕು.

❖ ❖ ❖

ಪರಿಮಿತಿಯ ನಿಬಂಧನೆಯನ್ನು ಮಾಡಿಕೊಂಡಮೇಲೆ ಸಮಾಧಾನದಿಂದಿರಬೇಕು. ಗಳಿಕೆ ಮಿತಿಗೆ ಒಳಪಟ್ಟಿದೆಯಲ್ಲ ಎಂದು ಹಪಹಪಿಸಬಾರದು. ಪರಿಗ್ರಹದ ಪರಿಮಿತಿಯಿಂದ ಭವಗಳು ಪರಿಮಿತವಾಯ್ತೆಂಬ ಅರಿವು ಕಣ್ತೆರೆಯಬೇಕು.

❖ ❖ ❖

ಪೂರ್ವ ಪಶ್ಚಿಮ ಮುಂತಾದ ದಿಕ್ಕುಗಳಲ್ಲಿ ವ್ಯವಹಾರವನ್ನು ನಿಯಂತ್ರಿಸುವುದು ದಿಗ್ವ್ರತ. ಯಾವ ಉದ್ದೇಶವೂ ಇಲ್ಲದ ವ್ಯರ್ಥ ಕಾಯಚೇಷ್ಟೆಯನ್ನು ನಿಯಂತ್ರಿಸುವುದು ಅನರ್ಥದಂಡವ್ರತ. ದೇಶದ ಮಿತಿಯಲ್ಲಿ ವ್ಯವಹಾರವನ್ನು ಮಿತಗೊಳಿಸುವುದು ದೇಶವ್ರತ. ಇವು ಮೂರೂ ಗುಣವ್ರತಗಳು.

❖ ❖ ❖

ಯಾವುದೇ ಕ್ರಿಯೆಯಲ್ಲಿ ತೊಡಗಿದಾಗ ಕರ್ಮಬಂಧ ಅನಿವಾರ್ಯ, ಆದರೆ ಉದ್ದೇಶ ಉದಾತ್ತವಾದಾಗ ಕರ್ಮಬಂಧ ಅಲ್ಪ. ಕುತ್ಸಿತ ಉದ್ದೇಶದಿಂದ ಮಾಡುವ ಕೆಲಸಗಳಿಂದ ಕರ್ಮಬಂಧ ಬಹಳ.

❖ ❖ ❖

ದೇಶಕಾಲಗಳ ರೀತಿ ನೀತಿಗಳಿಗನುಸಾರವಾಗಿ ದೋಷರಹಿತವಾದ ಶುದ್ಧ ಆಹಾರವನ್ನು ಮುನಿಗಳಿಗೆ ದಾನ ಮಾಡಬೇಕಾದುದು ಶ್ರಾವಕನ ದೈನಿಕ ಕರ್ತವ್ಯ. ಇದನ್ನು ಅತಿಥಿ ಸಂವಿಭಾಗ ಎನ್ನುತ್ತಾರೆ.

❖ ❖ ❖

ಹಿಂಸೆ ಮೊದಲಾದ ಪಂಚಪಾಪಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು 'ಸಾಮಾಯಿಕ'ಕ್ಕಿಂತ ಹಿರಿಯ ಉಪಾಯವಿಲ್ಲ. ಸಮಭಾವ, ಸಮಚಿತ್ತದಲ್ಲಿ ಮಾಡುವ ಸಾಮಾಯಿಕವು ಧ್ಯಾನಕ್ಕೆ ಸಮ. ಅದರಿಂದ ಆತ್ಮಹಿತ.

❖ ❖ ❖

ಆಹಾರದಾನ ಶ್ರಾವಕನ ಸರ್ವಶ್ರೇಷ್ಠದಾನ. ಅನ್ನದಾನದಿಂದ ದಾನಿ ಧನ್ಯನಾಗುವನು, ಪಾತ್ರದಾನದಿಂದ ಸ್ವರ್ಗಾಪವರ್ಗ ಲಾಭ. ಆದರೂ ತನ್ನ ದಾನ ಸುಪಾತ್ರನಿಗೆ ಸೇರಿತೋ ಅಪಾತ್ರನಿಗೆ ಸಂದಿತೋ ಎಂಬ ವಿಕಲ್ಪ ದಾನಿಗೆ ಸಲ್ಲದು.

❖ ❖ ❖

ಯಾವ ಗೃಹಸ್ಥರ ಮನೆಯಲ್ಲಿ ಮುನಿ, ಸಾಧು, ಸಂತರಿಗೆ ವ್ರತ ನಿಯಮ ಯುಕ್ತರಿಗೆ ಊಟೋಪಚಾರ ನಡೆಯುವುದಿಲ್ಲವೋ ಅಂತಹ ಮನೆಯಲ್ಲಿ ಶಾಸ್ತ್ರಜ್ಞರೂ ನಿಯಮಪಾಲಕರೂ ಆದ ಜ್ಞಾನಿಗಳು ಊಟಮಾಡುವುದಿಲ್ಲ.

❖ ❖ ❖

ಮುನಿಗಳಿಗೆ ಶ್ರದ್ಧೆ ಭಕ್ತಿ ನಿಷ್ಠೆ ನಿಯಮಗಳಿಂದ ಆಹಾರದಾನ ಮಾಡಿ ಶೇಷಾನ್ನವನ್ನು ಭೋಜನಮಾಡುವ ಶ್ರಾವಕನಿಗೆ ಸಂಸಾರದ ಸರ್ವಸುಖ ಲಭಿಸುವುದು, ಕ್ರಮವಾಗಿ ಅವನು ಮುಕ್ತಿಯನ್ನು ಪಡೆಯುವನು.

❖ ❖ ❖

ಭಯ ಭೀತಿಗಳಿಂದ ತೊಳಲುವವರನ್ನು ಸಂತೈಸುವುದು ಅಭಯದಾನ. ಅಭಯದಾನ ಸರ್ವದಾನಗಳ ಶಿರೋಮಣಿ.

❖ ❖ ❖

ಮನೋನಿಗ್ರಹವಿಲ್ಲದೆ ಸಂಯಮಮಾರ್ಗದಲ್ಲಿ ನಡೆಯದಿರುವವರನ್ನು ಸಾಧು ಎನ್ನುವುದು ಹೇಗೆ? ಅವನಿಗೆ ಸಾಧುವೇಷ ಒಪ್ಪುವುದೆ? ರಾಜನ ವೇಷದಲ್ಲಿರಲಿ ಭಿಕ್ಷುಕನ ವೇಷದಲ್ಲಿರಲಿ ವಿಷವನ್ನು ಕುಡಿದರೆ ದುರ್ಮರಣ ತಪ್ಪುವುದೆ? ಹಾಗೆಯೇ ವಿಷಯವೆಂಬ ವಿಷದಿಂದ ದೂರನಾಗದೆ ಕರ್ಮಬಂಧ ತಪ್ಪದು.

❖ ❖ ❖

ನಿಶ್ಚಯ ದೃಷ್ಟಿಯಿಂದ ನೋಡಿದರೆ ಭಾವಲಿಂಗವೇ ಅತ್ಯಂತ ಶ್ರೇಷ್ಠವಾದುದು, ದ್ರವ್ಯಲಿಂಗವು ಎಂದು ಪರಮಾರ್ಥಸಾಧಕವಲ್ಲ. ಜಿನಾಜ್ಞೆಯ ಪ್ರಕಾರ ಜೀವನ ಸರ್ವಕರ್ಮ ಬಂಧಕ್ಕೆ ಭಾವವೇ ಪ್ರಮುಖ ಕಾರಣ.

❖ ❖ ❖

ಅಂತರಂಗ ಶುದ್ಧತೆಗೆ ಶಾಸ್ತ್ರಜ್ಞಾನವು ನಿಮಿತ್ತವಾಗಬಹುದು. ಆದರೆ ಅಂತರಂಗ ಶುದ್ಧಿಯನ್ನು ತಾರದ ಪುಸ್ತಕ ಜ್ಞಾನ ವ್ಯರ್ಥವೇ ಸರಿ. ಕುಂಭದ ಒಳಗೆ ಹೊಲಸನ್ನು ತುಂಬಿ ಮಡಿವಸ್ತ್ರವನ್ನು ಹೊದಿಸಿದ ಹಾಗೆ ವಿಡಂಬನೆಯಾಗುವುದು.

❖ ❖ ❖

ಯಾರು ದೇಹದ ಮೇಲಿನ ಮಮತೆಯನ್ನು ತೊರೆದಿರುವನೋ, ಯಾರು ಕಷಾಯಗಳನ್ನೆಲ್ಲಾ ಕಳೆದಿರುವನೋ, ಯಾರು ನಿರಂತರವಾಗಿ ತನ್ನಾತ್ಮಧ್ಯಾನದಲ್ಲಿ ಲೀನನಾಗಿರುವನೋ ಅವನು ಭಾವಲಿಂಗಿಯತಿ ಎಂಬ ಅಭಿಧಾನಕ್ಕೆ ಅರ್ಹನಾಗಿರುವನು.

❖ ❖ ❖

ಹಿಂಸೆ, ಹುಸಿ, ಕಳ್ಳತನ, ವಿಷಯ ಸೇವನೆ, ಪರಿಗ್ರಹದಕಾಂಕ್ಷೆ - ಈ ಐದನ್ನೂ ಪೂರ್ಣರೂಪದಿಂದ ಬಿಟ್ಟವನು ಮಹಾವ್ರತಿ ಎನಿಸುವನು. ಜಿನವಾಣಿಯ ಆದೇಶದಂತೆ ಈ ಐದೂ ವ್ರತಗಳನ್ನು ನಡೆಸುತ್ತಾ ಸಾಧನಾ ಪಥದಲ್ಲಿ ಸಾಗುವವನು ಯತಿ ಎನಿಸುವನು.

❖ ❖ ❖

ಎಲ್ಲಾ ವರ್ಗದವರಿಗೂ ಹೃದಯದಂತೆ, ಎಲ್ಲ ಶಾಸ್ತ್ರಗಳಿಗೆ ಉಗಮ ಸ್ಥಾನದಂತೆ, ಎಲ್ಲ ವ್ರತ ನಿಯಮಗಳ ಸಮೂಹದಂತಿರುವ ಅಹಿಂಸಾ ವ್ರತವು ಸಾರವತ್ತಾದುದಾಗಿದೆ.

❖ ❖ ❖

ತನಗಾಗಿಯಾಗಲಿ ಪರೋಪಕಾರಕ್ಕಾಗಿಯೇ ಆಗಲಿ ಕೋಪದಿಂದಾಗಲಿ ಭಯದಿಂದಾಗಲಿ ಸುಳ್ಳನ್ನು ಎಂದು ಆಡಬಾರದು, ಆಡಿಸಬಾರದು, ಆಡುವವರನ್ನು ಅನುಮೋದಿಸಬಾರದು.

❖ ❖ ❖

ಹಳ್ಳಿಯಲ್ಲಾಗಲಿ, ಪಟ್ಟಣದಲ್ಲಾಗಲಿ, ಕಾಡಿನಲ್ಲಾಗಲಿ, ನಾಡಿನಲ್ಲಾಗಲಿ ತನ್ನದಲ್ಲದ ವಸ್ತುವನ್ನು ಕಂಡಾಗ ಆಸೆಯಿಂದ ಪಡೆಯುವ ಭಾವವನ್ನು ಮನದಲ್ಲಿ ತರಬಾರದು.

❖ ❖ ❖

ಚೈತನ್ಯ ವಸ್ತುವಾಗಿರಲಿ ಜಡವಸ್ತುವಾಗಿರಲಿ ಅಲ್ಪಬೆಲೆಯದಾಗಿರಲಿ ಅಮೂಲ್ಯವಾದುದಾಗಿರಲಿ ಕೊಡಲ್ಪಡದ ವಸ್ತುವನ್ನು ಸಾಧು ಸ್ವೀಕರಿಸಬಾರದು.

❁ ❁ ❁

ಸ್ತ್ರೀಯಾದವಳು ಮುದುಕಿಯಾಗಿರಲಿ, ಯುವತಿಯಾಗಿರಲಿ, ಮಗುವಾಗಿರಲಿ ಅವಳನ್ನು ಮಾತೆ, ಸೋದರಿ, ಸುತೆ ಎಂಬ ಭಾವದಿಂದ ಕಾಣುತ್ತಾ ಮೋಹೋದ್ದೀಪಕ ಕಥೆ ಪ್ರಸಂಗಗಳನ್ನು ಹೇಳದೆ, ಕೇಳದೆ, ಬ್ರಹ್ಮಚರ್ಯ ವ್ರತವನ್ನು ಪಾಲಿಸುವವನು ಲೋಕಪೂಜ್ಯನಾಗುವನು.

❁ ❁ ❁

ಸಚ್ಚಾರಿತ್ರದ ಗುರುತರ ಹೊಣೆಯನ್ನು ಹೊತ್ತಿರುವ ಮುನಿ ನಿರಪೇಕ್ಷ ಭಾವದಿಂದ ಒಳಗಿನ ಹೊರಗಿನ ಪರಿಗ್ರಹಗಳೆಲ್ಲವನ್ನೂ ತೊರೆದು ಅಪರಿಗ್ರಹಿಯಾಗುವನು.

❁ ❁ ❁

ತಾಯಿಯ ಗರ್ಭದಿಂದಲೂ ಜೊತೆಗೆ ಬಂದ ಈ ಶರೀರ ಕೂಡ ತನ್ನದಲ್ಲದ ಪರವಸ್ತು ಎಂದು ಭಾವಿಸುವ, ಮುಂದೆ ಮತ್ತೊಂದು ಶರೀರವನ್ನು ಪಡೆಯುವ ಮರುಹುಟ್ಟು ಬೇಡವೆಂಬ ತ್ಯಾಗಿಗಳಿಗೆ ಯಾವ ಪರಿಗ್ರಹದಿಂದ ಸುಖವಾದೀತು?

❁ ❁ ❁

ಪರಿಗ್ರಹಗಳೆಂದು ಉಲ್ಲೇಖಿಸುವ ಬಾಹ್ಯವಸ್ತುಗಳು ದಿಟವಾದ ಪರಿಗ್ರಹವಲ್ಲ, ಆ ವಸ್ತುಗಳ ಪರವಾಗಿ ನಮಗಿರುವ ಆಕಾಂಕ್ಷೆ, ಮೋಹಭಾವವೇ ನಿಜವಾದ ಪರಿಗ್ರಹ.

❁ ❁ ❁

ಲೌಕಿಕ ವಸ್ತು ನಿಕರದಲ್ಲಿ ಮಿತವಾದ ಆಸಕ್ತಿಯನ್ನಿರಿಸಿಕೊಂಡು ಸಂತೃಪ್ತಭಾವವನ್ನು ಬೆಳೆಸಿಕೊಂಡು ಸಂತೋಷದಿಂದ ಬದುಕುವ ಜೀವ ಸುಖಿ ಮತ್ತು ಸ್ತುತ್ಯ.

# ಮುನಿಚರ್ಯೆ

ಮುನಿಯಾದವನು ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ ಅನ್ನ ಪಾನ ಮೊದಲಾದ ಎಲ್ಲ ಆವಶ್ಯಕ ವಸ್ತುಗಳನ್ನು ಮನಸ್ಸಿನಲ್ಲಿ ನೆನಪಿನಲ್ಲಿ ಯೋಚಿಸದೆ ಭಾವಿಸದೆ ಇರಬೇಕು. ಇದು ಆಜ್ಞೆ, ಅನುಶಾಸನ.

❖ ❖ ❖

ಜೀವಜಂತುಗಳಿರದ ಶುದ್ಧ ನೆಲದಲ್ಲಿ ನಾಲ್ಕು ಮೊಳದಷ್ಟು ದೂರ ಪರಿವೀಕ್ಷಿಸಿ ಜೀವಿಗಳಿಗೆ ಹಿಂಸೆಯಾಗದಂತೆ ಹಗಲಿನಲ್ಲಿ ಮಾತ್ರ ಮುನಿಗಳು ನಡೆಯಬೇಕು.

❖ ❖ ❖

ಕ್ಷೇತ್ರವನ್ನು ರಕ್ಷಿಸಲು ಬೇಲಿಯನ್ನು ಹಾಕುವಂತೆ, ನಗರವನ್ನು ರಕ್ಷಿಸಲು ಕೋಟೆ ಕಂದಕಗಳನ್ನು ನಿರ್ಮಿಸುವಂತೆ, ಮುನಿಚರ್ಯೆಯನ್ನು ರಕ್ಷಿಸಿಕೊಳ್ಳಲು ಮನೋಗುಪ್ತಿ ವಚನಗುಪ್ತಿ ಮತ್ತು ಕಾಯಗುಪ್ತಿಗಳ ನಿಯಮವನ್ನು ಪಾಲಿಸಬೇಕು.

❖ ❖ ❖

ಪರವಸ್ತುಗಳ ಪರವಾದ ಏಕತ್ವ ಬುದ್ಧಿಯನ್ನು ಪೂರ್ಣವಾಗಿ ತೊರೆದು ನಿರ್ಮಲರೂಪದ ತನ್ನ ಶುದ್ಧಾತ್ಮನಲ್ಲಿ ಲೀನವಾಗಿ ಅನುದಿನ ಧ್ಯಾನಿಸುವ ಮುನಿ-ಆತ್ಮದರ್ಶಿಯಾಗುವನು.

❖ ❖ ❖

ಆತ್ಮಜ್ಞಾನಿಯಾಗಬಯಸುವ ಮುನಿ ಸಾಮಾಯಿಕ, ಜಿನಸ್ತವನ, ವಂದನ, ಪ್ರತಿಕ್ರಮಣ, ಕಾಯೋತ್ಸರ್ಗ ಮತ್ತು ಪ್ರತ್ಯಾಖ್ಯಾನ ಎಂಬ ಆರು ಆವಶ್ಯಕ ಕ್ರಿಯೆಗಳಲ್ಲಿ ಅವಶ್ಯವಾಗಿ ತೊಡಗಬೇಕು.

❖ ❖ ❖

ಹೊನ್ನಾಗಲಿ ಮಣ್ಣಾಗಲಿ ಶತ್ರುವಾಗಲಿ ಮಿತ್ರನಾಗಲಿ ಸಮಭಾವದಿಂದ

ಕಾಣುವ ದೃಷ್ಟಿಸಾಧಿಸಿದರೆ ಅದು ಸಾಮಾಯಿಕ. ರಾಗ ದ್ವೇಷ ರಹಿತನಾಗಿ ಉದಾಸೀನ ಪ್ರವೃತ್ತಿಯನ್ನು ಸಾಧಿಸುವುದೇ ಸಾಮಾಯಿಕ.

❖ ❖ ❖

ಧ್ಯಾನ ಎನ್ನುವುದು ಸರ್ವಕರ್ಮಗಳನ್ನು ನಾಶಮಾಡುವ ವಜ್ರಾಯುಧ. ಧ್ಯಾನ ಮಗ್ನನಾದ ಸಾಧು ಎಲ್ಲ ದೋಷಗಳನ್ನು ಮೆಟ್ಟಿನಿಲ್ಲುವನು. ಎಲ್ಲ ಅತಿಚಾರಕ್ಕೂ ಧ್ಯಾನ ಒಂದೇ ಮಹಾಮಂತ್ರವಾಗ ಬಲ್ಲದು.

❖ ❖ ❖

ಯಾವ ಶುದ್ಧಾತ್ಮನು ತನ್ನ ಸ್ವರೂಪವನ್ನು ಯಾವ ಕಾಲದಲ್ಲಿಯೂ ಬಿಡುವುದಿಲ್ಲವೋ ಮತ್ತು ಯಾವ ಕಾರಣಕ್ಕೂ ಅನ್ಯರೂಪವನ್ನು ಹೊಂದುವುದಿಲ್ಲವೋ ಮತ್ತು ಯಾವ ಚೈತನ್ಯವು ಎಲ್ಲವನ್ನೂ ಕಾಣುವ ಮತ್ತು ತಿಳಿಯುವ ಸಾಮರ್ಥ್ಯವನ್ನು ಹೊಂದಿರುವನೋ ಅಂತಹ ಚೈತನ್ಯ ಸ್ವರೂಪಿ ಪರಮಾತ್ಮನಂತೆ ತನ್ನ ಆತ್ಮನೂ ಇದ್ದಾನೆ ಎಂದು ಪರಿಭಾವಿಸುವುದೇ ಧ್ಯಾನ ಸ್ವರೂಪವಾಗಿದೆ.

❖ ❖ ❖

ಮನದಾಳದಲ್ಲಿ ಕ್ರೋಧ ಮಾನ ಮಾಯಾ ಲೋಭರೂಪದ ಕಷಾಯಗಳ ಸಂಚಾರಕ್ಕೆ ಎಡೆಮಾಡಿಕೊಡದೆ ಆತ್ಮಾನುಸಂಧಾನಕ್ಕಾಗಿ ಬ್ರಹ್ಮಚರ್ಯೆಯನ್ನು ನಿಷ್ಠೆಯಿಂದ ಪಾಲಿಸುತ್ತಾ ಉಪವಾಸ, ಗುಣಗಣಗಳ ಆರಾಧನೆಯಲ್ಲಿ ತಲ್ಲೀನನಾಗಿರುವುದೇ ತಪವೆನಿಸಿಕೊಳ್ಳುತ್ತದೆ.

❖ ❖ ❖

ಜ್ಞಾನಾರ್ಜನೆ ಮತ್ತು ಧ್ಯಾನದಲ್ಲಿ ಏಕಾಗ್ರತೆಗಳನ್ನು ಸಾಧಿಸುವಲ್ಲಿ ಜಡತೆ ದೂರಾಗಬೇಕಾದರೆ ಅನ್ನಾಹಾರಗಳಲ್ಲಿ ಮಿತಿ ಮತ್ತು ಅನಾಸಕ್ತಿಯಿರಬೇಕು. ಆದರೆ ಜ್ಞಾನವಿಲ್ಲದೆ ಕೇವಲ ಕಾಯಕ್ಲೇಶದ ಬಾಹ್ಯ ತಪದಿಂದ ಸಿದ್ಧಿ ಒದಗುವುದಿಲ್ಲ.

ಅನಶನ ಎಂದರೆ ಕೇವಲ ನಿರಾಹಾರವಲ್ಲ, ಇಂದ್ರಿಯಗಳ ಉಪಶಮ ಮತ್ತು ಹತೋಟಿ ಮೂಲೋದ್ದೇಶ. ಇಂದ್ರಿಯಗಳ ದಮನಮಾಡಿದ ಯೋಗಿ ನಿಜಾರ್ಥದಲ್ಲಿ ಉಂಡುಪವಾಸಿ ಎನಿಸುವ ತ್ಯಾಗಿ.

❁ ❁ ❁

ಅಜ್ಞಾನಿಯಾದವನಿಗೆ ಅಷ್ಟೋಪವಾಸ ಷಷ್ಟೋಪವಾಸಗಳಿಂದಲೂ ಆಗಲಾರದ ಶುದ್ಧಿ, ಜ್ಞಾನಿಗೆ ಅನಶನವಿಲ್ಲದೆಯೇ ಅತಿಶಯವಾಗಿ ಆಗಬಹುದು.

## ಪ್ರತಿಕ್ರಮಣ

ಅನಂತಾನಂತ ಭವಗಳಲ್ಲಿ ಸಂಗ್ರಹವಾದ ಕರ್ಮರಾಶಿ ನಮ್ಮನ್ನು ಆವರಿಸಿರುವುದು. ತಪಸ್ಸೆಂಬ ಅಗ್ನಿಯ ಸಂಪರ್ಕದಿಂದ ಆ ಕರ್ಮರಾಶಿ ಸುಟ್ಟು ಭಸ್ಮವಾಗುವುದು. ಅದರಿಂದ ತಪವನ್ನು ಪ್ರಾಯಶ್ಚಿತ್ತ ಎಂದೂ ಕರೆಯಬಹುದಾಗಿದೆ.

❁ ❁ ❁

ಒಂದು ಸಣ್ಣ ಮುಳ್ಳು ಶರೀರದಲ್ಲಿ ಸೇರಿ ಅತೀವ ವೇದನೆಗೆ ಕಾರಣವಾಗಿದ್ದುದನ್ನು ಕಿತ್ತೊಗೆದೊಡನೆ ಉಪಶಮ ಸುಖ ಉಂಟಾಗುವುದೋ ಅದೇ ರೀತಿ ಸಾಧು ತನ್ನ ತಪ್ಪನ್ನು ಮಾನಕಷಾಯ ಬಿಟ್ಟು ಗುರುವಿನೆದುರು ಹೇಳಿ ಪ್ರಾಯಶ್ಚಿತ್ತವನ್ನು ಪಡೆದರೆ ನೆಮ್ಮದಿ ದೊರೆಯುತ್ತದೆ.

❁ ❁ ❁

ವಿನಯ ಮೋಕ್ಷದ ಹೆಬ್ಬಾಗಿಲು. ವಿನಯವಿಲ್ಲದ ಜ್ಞಾನ, ತಪ ನಿರರ್ಥಕ. ಆಚಾರ್ಯರಾಗಿರಲಿ ಶಿಷ್ಯರಾಗಿರಲಿ ವಿನಯವೇ ಸರ್ವರಿಗೂ ಭೂಷಣ.

# ತಪ

ಬಾಹ್ಯ ಅಭ್ಯಂತರ ಎಂಬ ಎರಡು ವಿಧದ ತಪದಲ್ಲಿ ಸ್ವಾಧ್ಯಾಯಕ್ಕೆ ಸಮನಾದ ತಪ ಭೂತ, ಭವಿಷ್ಯತ್ ಮತ್ತು ವರ್ತಮಾನಗಳಲ್ಲಿ ಇಲ್ಲ.

❖ ❖ ❖

ತನ್ನನ್ನು ಎಲ್ಲರೂ ಜ್ಞಾನಿ ಎಂದು ಗೌರವಿಸಬೇಕೆಂಬ ಯಶೋಲೋಭವಿಲ್ಲದೆ, ಜ್ಞಾನಮಾರ್ಗವನ್ನರಿತು ಸುಜ್ಞಾನಿಯಾಗಿ ಕರ್ಮಕಳಂಕವನ್ನು ಕಳೆದುಕೊಳ್ಳಲು ಶಾಸ್ತ್ರಾಭ್ಯಾಸ ಮಾಡಿದಾಗ ಶ್ರುತಲಾಭ, ಸುಖ, ಶಾಂತಿ.

❖ ❖ ❖

ಸರಿಯಾದ ಜ್ಞಾನವನ್ನು ಮೈಗೂಡಿಸಿಕೊಂಡಾಗ ಏಕಾಗ್ರತೆ ಮತ್ತು ಧ್ಯಾನದ ಸಿದ್ಧಿಯಾಗುವುದು. ಧ್ಯಾನದಿಂದ ಕರ್ಮ ಸಹಜವಾಗಿಯೇ ನಿರ್ಜರೆಯಾಗುವುದು. ಕರ್ಮನಿರ್ಜರೆಯಾದೊಡನೆ ಮೋಕ್ಷಪ್ರಾಪ್ತಿ ನಿಶ್ಚಯ. ಹೀಗೆ ಉತ್ತರೋತ್ತರ ಮೋಕ್ಷದವರೆಗೆ ಕೊಂಡೊಯ್ಯುವ ಜ್ಞಾನಾರ್ಜನೆ ನಿಶ್ಚಯ ತಪ.

❖ ❖ ❖

ಕಾಯೋತ್ಸರ್ಗ ಭಂಗಿಯಲ್ಲಿದ್ದಾಗ ದೇಹದ ಜಡತೆ ಜಾರುವುದು, ಬುದ್ಧಿ ಜಾಗೃತವಾಗುವುದು, ಉಪಸರ್ಗಗಳನ್ನು ಸಹಿಸುವ ಸಾಮರ್ಥ್ಯ ಬರುವುದು. ಆತ್ಮಾನುಚಿಂತನೆಗೆ ಅವಕಾಶವಾಗುವುದು. ಧ್ಯಾನ ಮತ್ತು ಅಧ್ಯಯನಕ್ಕೆ ಏಕಾಗ್ರತೆ ಬರುವುದು. ಅದರಿಂದ ಕಾಯೋತ್ಸರ್ಗವು ಬಹು ಉಪಯೋಗೀ ಆಸನವಾಗಿದೆ.

❖ ❖ ❖

ತಪಸ್ಸೆಂಬುದು ಉರಿಯುತ್ತಿರುವ ಜ್ವಾಲೆಯಂತಿದೆ. ಅದನ್ನು ಜ್ಞಾನವೆಂಬ ಗಾಳಿಯಿಂದ ಪ್ರಜ್ವಲಿಸುವಂತೆ ಮಾಡಿದರೆ ಕರ್ಮಸಮೂಹವು ಕಾಡ್ಗಿಚ್ಚಿನಲ್ಲಿ

ಸುಟ್ಟಿರುಳುವ ಹುಲ್ಲಿನ ರಾಶಿಯಂತೆ ಬೀಜಸಮೇತ ನಿರ್ನಾಮವಾಗುವುದು.

❖ ❖ ❖

ಮನುಷ್ಯ ಶರೀರದಲ್ಲಿ ಶಿರಸ್ಸು ಹೇಗೆ ಮುಖ್ಯವೋ, ಬೆಳೆಯುವ ಮರಕ್ಕೆ ಆದರ ಬೇರು ಎಷ್ಟು ಮುಖ್ಯವೋ ಹಾಗೆಯೇ ಸಾಧುಗಳ ಸಾಧನೆಗೆ ತಪವೇ ಅಡಿಪಾಯ.

❖ ❖ ❖

ಮನಸ್ಸು ದೃಢವಾಗಿ ನೆಲೆನಿಲ್ಲುವವರೆಗೆ ಮಾತ್ರ ಭಾವನೆ, ಅನುಪ್ರೇಕ್ಷೆ ಅಥವಾ ಚಿಂತನಗಳ ಪಸಕ್ಷೇಪ. ಒಂದು ಬಾರಿ ಚಿತ್ತ ಸ್ಥಿರತೆಯನ್ನು ಸಾಧಿಸಿ ಆತ್ಮನಲ್ಲಿ ಲೀನವಾದ ಮೇಲೆ ಉಳಿದೆಲ್ಲವೂ ಗೌಣ, ನಿಮಿತ್ತಮಾತ್ರ.

❖ ❖ ❖

ಉಪ್ಪು ನೀರಿನಲ್ಲಿ ಕರಗಿ ತಾನೇ ಲಯವಾಗುವ ಹಾಗೆ ಧ್ಯಾನವೆಂಬ ಅಗ್ನಿ ಪರಿಸ್ಫುಟವಾದಾಗ ಅಶುಭ ಶುಭ ಕರ್ಮರಾಶಿ ಲಯವಾಗಿ ಹೋಗುವುದು.

❖ ❖ ❖

ಈ ಪ್ರಪಂಚದ ಕ್ಷಣಿಕ ವ್ಯವಹಾರವನ್ನು ಸರಿಯಾಗಿ ಅರಿತವನು, ನಿರ್ಭಯನಾದವನು, ಏಕಾಂಗಿಯಾಗಿರುವವನು, ಆಶಾಪಾಶದಿಂದ ದೂರನಾಗಿರುವವನು ನಿಶ್ಚಲ ಧ್ಯಾನದಲ್ಲಿ ಮಗ್ನನಾಗಲು ಸಮರ್ಥನಾಗುವನು.

## ಆತ್ಮತತ್ವ

ಯೋಗಿಯಾದವನು ನಿತ್ಯವೂ ಧ್ಯಾನದಲ್ಲಿ ಲೀನನಾಗಿದ್ದು ತನ್ನ ದೇಹದಲ್ಲಿರುವ ಶುದ್ಧಾತ್ಮ ತನ್ನ ಶರೀರಪ್ರಮಾಣದಷ್ಟೇ ಪ್ರಮಾಣದಲ್ಲಿದ್ದು

ನೋಡುವ ತಿಳಿಯುವ ಕಾರ್ಯವನ್ನು ಮಾತ್ರ ಮಾಡುತ್ತಾನೆ ಎಂಬ ದೃಢವಾದ ನಂಬಿಕೆಯಿಂದ ಪಾಪವನ್ನು ಕಳೆದು ಕೊಳ್ಳುವನು.

❖ ❖ ❖

ಆತ್ಮನು ಅಚಲ ಅವಿನಾಶಿ ಅಪರಿಣಾಮಿ ಅನುಪಮ ಅತೀಂದ್ರಿಯ ಅವನಿಗೆ ಯಾವ ಬಂಧವೂ ಇಲ್ಲ. ಯಾವ ಅಡೆತಡೆಯೂ ಇಲ್ಲ. ಒಂದು ಬಾರಿ ಶುದ್ಧನಾದ ಆತ್ಮ ಎಂದೆಂದಿಗೂ ಬದ್ಧನಾಗಲಾರ.

❖ ❖ ❖

ಆತ್ಮ ಬೇರೆ ಶರೀರ ಬೇರೆ, ಲೌಕಿಕದ ಸಕಲವಸ್ತುಗಳು ಬೇರೆ, ಇವೆಲ್ಲದರಿಂದ ತನ್ನ ಶುದ್ಧಾತ್ಮ ಭಿನ್ನ ಎಂದು ಅರಿತು ಅಭ್ಯಾಸಿಸುವವನು ದೇಹ ಮತ್ತು ಪದವಿಗಳ ಸಂಗವನ್ನು ತೊರೆಯುವನು.

❖ ❖ ❖

ನೀರಿನಲ್ಲಿ ಮುಳುಗಿದ ಮಣ್ಣುಮೆತ್ತಿದ ಸೋರೆ ಬುರುಡೆಯಂತೆ ಪಕ್ವವಾದ ದೂದಿಕಾಯಂತೆ ಅಗ್ನಿಜ್ವಾಲೆಯಂತೆ ಮೇಲ್ಮುಖವಾಗಿ ಪುಟಿದ ಬಾಣದಂತೆ ಸದಾ ಊರ್ಧ್ವಗಾಮಿ ಪ್ರವೃತ್ತಿ ಆತ್ಮನದಾಗಿರುವುದು.

❖ ❖ ❖

ಮೋಕ್ಷಾಗ್ರಕ್ಕೇರುವ ಬಯಕೆ ಹೊಂದಿದ ಸಾಧಕನು ಲೌಕಿಕದ ಎಲ್ಲ ಬಯಕೆಯನ್ನು ತೊರೆಯಬೇಕು. ಹಿಂದಿನಿಂದ ಸಂಚಯಿಸಿದ ಕರ್ಮವನ್ನು ನಾಶಮಾಡಲು ಸಾಧನವಾಗುವವರೆಗೆ ಮಾತ್ರ ಈ ದೇಹವನ್ನು ಪೋಷಿಸ ಬೇಕು. ಆ ಉದ್ದೇಶವನ್ನು ಪೂರೈಸಲು ಅಸಮರ್ಥವಾದಾಗ ಈ ಶರೀರವನ್ನು ತೊರೆಯಬೇಕು.

❖ ❖ ❖

ಮರಣದ ವ್ಯಾಪ್ತಿಗೆ ಹೊರಗಾದವರು ಯಾರೂ ಇಲ್ಲ. ಅವನು ಧೀರನಾಗಲಿ ಭೀರುವಾಗಲಿ ಸಾಯದೆ ಮಾರ್ಗವಿಲ್ಲ ಎಂದ ಮೇಲೆ ಸಮಾಧಾನದಿಂದ ಸಾವನ್ನು ಸ್ವಾಗತಿಸುವುದು ಜಾಣತನ.

ಅಜ್ಞಾನಿಯಾಗಿ ಅನೇಕ ಭವಗಳಲ್ಲಿ ಕಾಯ ಕ್ಲೇಶಾದಿ ತಪಗಳಿಂದ ಕಳೆಯುವಷ್ಟು ಕರ್ಮವನ್ನು ಜ್ಞಾನಿಯಾದವನು ಒಂದು ಉಚ್ಛ್ವಾಸ ಸಮಯದಲ್ಲಿ ಗುಪ್ತಿಗಳ ಪಾಲನೆಯಿಂದ ಮಾಡುವನು.

❖ ❖ ❖

ಯುದ್ಧರಂಗದಲ್ಲಿ ಸೇನಾಧಿಪತಿಯ ಮರಣವಾದೊಡನೆ ಸೈನ್ಯವೆಲ್ಲ ದಿಕ್ಕೆಟ್ಟು ಓಡುವಂತೆ ಕರ್ಮರಾಜನಾದ ಮೋಹನೀಯ ಕರ್ಮದ ನಾಶವಾದೊಡನೆ ಉಳಿದ ಕರ್ಮಗಳೆಲ್ಲ ನಿಸ್ಸತ್ವವಾಗುವುವು.

❖ ❖ ❖

ಮುಕ್ತಾತ್ಮನ ಆನಂದಾನುಭವ ಶಬ್ದಗಳ ವ್ಯಾಪ್ತಿಗೆ ಮೀರಿದುದು. ತರ್ಕ, ವಾದ, ಜಿಜ್ಞಾಸೆಗಳ ಹಿಡಿತಕ್ಕೆ ಮೀರಿದುದು. ಸಾಮಾನ್ಯರ ಬುದ್ಧಿ ಶಕ್ತಿಗೆ ನಿಲುಕದುದೂ, ಎಲ್ಲ ತೇಜಸ್ಸಿಗೂ ಅಧಿಕಾಧಿಕವಾದದ್ದೂ ಆಗಿರುವುದರಿಂದ ಅನಿರ್ವಚನೀಯವಾಗಿದೆ.

❖ ❖ ❖

ಎಲ್ಲಿ ಸುಖ, ದುಃಖ, ಪೀಡೆ, ವೇದನೆ, ಜನನ, ಮರಣ, ಹಿಗ್ಗು ಕುಗ್ಗುಗಳಿಲ್ಲವೋ ಅದನ್ನು ನಿರ್ವಾಣನೆಲೆ ಎನ್ನುವರು.

❖ ❖ ❖

ಮೋಕ್ಷದಲ್ಲಿ ಕೇವಲಜ್ಞಾನ ದರ್ಶನಗಳು ಮಾತ್ರ ಇವೆ. ಅಲ್ಲಿಯದು ಅಪೇಕ್ಷಾರಹಿತ ಸೌಖ್ಯ, ಅಸೀಮಜ್ಞಾನ, ಅನಂತಸುಖ.

❖ ❖ ❖

ಎಲ್ಲಿ ಸರ್ವದಾ ಕ್ಷೇಮ ಮಾಂಗಲ್ಯಗಳ ಅತೀಂದ್ರಿಯ ಅನುಭವ ಸಿಗುವುದೋ ಅದೇ ಮುಕ್ತಿ.

❖ ❖ ❖

## ಷಡ್ದ್ರವ್ಯ

ಯಾವುದು ಸ್ವಭಾವವನ್ನು ಬಿಟ್ಟು ಕೊಡದೆ ಉತ್ಪಾದ ವ್ಯಯ ಧ್ರೌವ್ಯ ಯುಕ್ತ ಮತ್ತು ಗುಣಯುಕ್ತ ಪರ್ಯಾಯರೂಪದಲ್ಲಿರುವುದನ್ನು ದ್ರವ್ಯ ಎಂದು ಹೇಳುತ್ತಾರೆ.

❖ ❖ ❖

ಧರ್ಮ ಅಧರ್ಮ ಆಕಾಶ ಕಾಲ ಜೀವ ಮತ್ತು ಅಜೀವ ಈ ಆರು ವಸ್ತುಗಳಿಂದ ಕೂಡಿ ಲೋಕವಿರುವುದು. ಈ ಷಡ್ದ್ರವ್ಯಗಳ ಮೊತ್ತವೇ ಲೋಕ.

❖ ❖ ❖

ಆಕಾಶ ಕಾಲ ಧರ್ಮ ಅಧರ್ಮ ಮತ್ತು ಅಜೀವ ಈ ದ್ರವ್ಯಗಳಿಗೆ ಲವಲೇಶವಾದರೂ ಚೇತನ (ಎಂದರೆ ನೋಡುವ ಮತ್ತು ತಿಳಿಯುವ ಶಕ್ತಿ) ಇಲ್ಲ. ಆದರಿಂದ ಈ ಐದೂ ದ್ರವ್ಯಗಳನ್ನು ಅಚೇತನ ಎಂದು ಪರಿಗಣಿಸಲಾಗುವುದು. ಜೀವ ದ್ರವ್ಯಮಾತ್ರ ಚೇತನಗುಣವನ್ನು ಹೊಂದಿರುವುದು. ಈ ಶಕ್ತಿ ಅದರ ವಿಶೇಷಗುಣ.

❖ ❖ ❖

ಆಕಾಶ, ಕಾಲ, ಧರ್ಮ, ಅಧರ್ಮ ಮತ್ತು ಜೀವದ್ರವ್ಯಕ್ಕೆ ಮೂರ್ತರೂಪ ವಿಲ್ಲ, ಇಂದ್ರಿಯ ಗ್ರಾಹ್ಯವಲ್ಲ. ಆದರೆ ಅಜೀವಕ್ಕೆ ಮಾತ್ರ ಮೂರ್ತರೂಪ ವಿದೆ. ಇದು ಅಜೀವ ಅಥವ ಪುದ್ಗಲದ ವಿಶೇಷ ಗುಣವಾಗಿದೆ.

❖ ❖ ❖

ಜೀವ ಮತ್ತು ಅಜೀವಗಳು ಮಾತ್ರ ಸಕ್ರಿಯವಾಗಿರುವುವು. ಪರಿಣಮನ ಶೀಲವಾಗಿರುವುವು. ಜೀವದ ಪರಿಣಮನಕ್ಕೆ ಅಜೀವವೂ ಅಜೀವದ ಪರಿಣಮನಕ್ಕೆ ಕಾಲವೂ ನಿಮಿತ್ತವಾಗಿರುವುದು.

❖ ❖ ❖

ಜೀವ ದ್ರವ್ಯ ಅನಂತ, ಅಜೀವ ದ್ರವ್ಯ ಅನಂತಾನಂತ, ಕಾಲದ್ರವ್ಯ ಲೋಕಪ್ರಮಾಣ ಅಸಂಖ್ಯಾತ. ಆದರೆ ಧರ್ಮ ಅಧರ್ಮ ಮತ್ತು ಆಕಾಶ ಇವು ಏಕದ್ರವ್ಯ ಅಖಂಡವಾಗಿರುವುವು.

❖ ❖ ❖

ಆಕಾಶದ್ರವ್ಯವು ಲೋಕ ಮತ್ತು ಅಲೋಕದಲ್ಲಿ ವ್ಯಾಪಕವಾಗಿರುವುದು. ಧರ್ಮ ಮತ್ತು ಅಧರ್ಮದ್ರವ್ಯಗಳು ಲೋಕಾಕಾರದಲ್ಲಿ ಮಾತ್ರ ಇರುವುವು. ಕಾಲ ದ್ರವ್ಯವು ವ್ಯವಹಾರದಲ್ಲಿ ಜೀವಿ (ಮಾನವರು) ಸಂಯೋಜಿಸಿ ಕೊಂಡಂತೆ ಇರುವುದು.

❖ ❖ ❖

ಈ ಆರೂ ದ್ರವ್ಯಗಳು ಅವ್ಯಾಬಾಧಿತವಾಗಿ ಒಂದರೊಡನೊಂದಿದ್ದರೂ ತಮ್ಮ ಸಹಜ ಸ್ವಭಾವದಿಂದ ಮಾರ್ಪಡುವುದಿಲ್ಲ. ಮತ್ತೊಂದನ್ನು ಪರಿವರ್ತಿಸಲು ಸಮರ್ಥವಲ್ಲ.

❖ ❖ ❖

ಮೀನುಗಳ ಸಂಚಾರದಲ್ಲಿ ನೀರು ಹೇಗೆ ಮಾಧ್ಯಮವಾಗಿ ಸಹಕರಿಸುತ್ತದೆಯೋ ಆದೇ ರೀತಿ ಜೀವ ಮತ್ತು ಅಜೀವಗಳ ಚಲನೆಗೆ ಧರ್ಮದ್ರವ್ಯವು ಅವಶ್ಯಕ ಮಾಧ್ಯಮವಾಗಿದೆ.

❖ ❖ ❖

ಧರ್ಮದ್ರವ್ಯ ಎಂಬ ಅಸ್ತಿಕಾಯವು ಪ್ರಕೃತಿಯಲ್ಲಿರುವ ಶಕ್ತಿ, ಅದು ಚಲಿಸುವ ವಸ್ತುವಿಗೆ ಸಹಕಾರಿಯೇ ಹೊರತು ಸ್ವಯಂ ಚಲಿಸುವುದಿಲ್ಲ. ಚಲಿಸದಿರುವ ವಸ್ತುವಿಗೆ ಪ್ರೇರೇಪಣೆಯನ್ನು ನೀಡುವುದಿಲ್ಲ. ಚಲಿಸುವ ವಸ್ತುಗಳಿಗೆ ಅನುಕೂಲ ಸಂಯೋಗ ಮಾತ್ರವಾಗಿರುವುದು.

❖ ❖ ❖

ವಸ್ತುವಿನ ಸಂಚಾರಕ್ಕೆ ಧರ್ಮದ್ರವ್ಯ ಹೇಗೆ ಸಹಕಾರಿಯಾಗಿರುವುದೋ ಹಾಗೆಯೇ ಚಲನೆಯ ನಿಲುಗಡೆಗೆ ಅಧರ್ಮದ್ರವ್ಯ ನಿಮಿತ್ತವಾಗಿರುತ್ತದೆ.

❖ ❖ ❖

ಲೋಕದ ಎಲ್ಲ ದ್ರವ್ಯಗಳಿಗೆ ಇರಲು ಅವಕಾಶ ನೀಡುವುದು ಆಕಾಶದ್ರವ್ಯ. ಇದು ಅಚೇತನ, ಮೂರ್ತರೂಪಿಯಲ್ಲ. ಅನಾದಿಕಾಲದಿಂದ ಅನಂತಕಾಲದವರೆಗೆ ಲೋಕಾಕಾರದ ತುಂಬ ತುಂಬಿರುವುದು. ಲೋಕಾಕಾರದಲ್ಲಿ ಮಾತ್ರ ಇದ್ದು ಅಲೋಕದಲ್ಲಿ ಇರುವುದಿಲ್ಲ.

❖ ❖ ❖

ಜೀವ ಮತ್ತು ಪುದ್ಗಲಗಳಲ್ಲಿ ಆಗುತ್ತಿರುವ ಎಲ್ಲ ಪರಿವರ್ತನೆಗೆ ಕಾಲ ದ್ರವ್ಯ ನಿಮಿತ್ತವಾಗುವುದು.

❖ ❖ ❖

ಸಮಯ, ಆವಲಿ, ಉಛ್ವಾಸಕಾಲ, ಸ್ತೋಕ - ಎಂಬವೆಲ್ಲ ಕಾಲಪರಿಮಿತಿಯನ್ನು ಗುರುತಿಸುವ ಮಾಪಕಗಳು ಮಾತ್ರ.

## ಸೃಷ್ಟಿ-ಬಂಧ

ಈ ಲೋಕವು ಅಕೃತ್ರಿಮ. ಸ್ವಭಾವದಿಂದ ಸಹಜವಾಗಿ ಇದೆ. ಸೃಷ್ಟಿಕರ್ತರಿಲ್ಲ. ಈ ಲೋಕಕ್ಕೆ ಆದಿ ಅಂತ್ಯಗಳೂ ಇಲ್ಲ. ಇದರ ಉದ್ದಗಲಕ್ಕೂ ಆಕಾಶ ಒದಗಿಸಿದ ಅವಕಾಶದಲ್ಲಿ ಜೀವ ಅಜೀವ ತುಂಬಿರುವುವು. ಈ ಲೋಕಕ್ಕೆ ಆದಿ ಹೇಗಿಲ್ಲವೋ ಹಾಗೆಯೇ ಅಂತ್ಯವೂ ಇಲ್ಲ.

❖ ❖ ❖

ಈ ಲೋಕದ ತುಂಬೆಲ್ಲ ಸೂಕ್ಷ್ಮ ಸ್ಥೂಲ ಕರ್ಮಾಣುಗಳು ನಿಬಿಡವಾಗಿ ತುಂಬಿವೆ. ಈ ಪುದ್ಗಲ ಪರಮಾಣುಗಳಲ್ಲಿ ಕೆಲವಕ್ಕೆ ಮಾತ್ರ ಕರ್ಮರೂಪದಲ್ಲಿ ಪರಿವರ್ತನೆಗೊಳ್ಳುವ ಶಕ್ತಿ ಇರುವುದು.

❖ ❖ ❖

ಕರ್ಮರೂಪವನ್ನು ತಾಳುವ ಶಕ್ತಿಯುಳ್ಳ ಪುದ್ಗಲ ಪರಮಾಣುಗಳು ಜೀವನ ಆತ್ಮಪ್ರದೇಶದಲ್ಲಿ ಉಂಟಾಗುವ ರಾಗ ದ್ವೇಷಗಳಿಗನುಸಾರವಾಗಿ ಶುಭ ಅಥವಾ ಅಶುಭರೂಪದಲ್ಲಿ ಪರಿವರ್ತನೆಗೊಂಡು ಬಂಧವಾಗುವುದು.

❖ ❖ ❖

ಜೀವನು ರಾಗಾದಿ ಭಾವಗಳಿಗೆ ಸ್ಪಂದಿಸಿ ಇಂದ್ರಿಯಗಳ ಮೂಲಕ ವಿಷಯ ಲೋಲುಪತೆಯಿಂದ ಕರ್ಮವನ್ನಾರ್ಜಿಸುವನು.

❖ ❖ ❖

ಹಲವು ಭವಗಳಲ್ಲಿ ಜೀವ ಶುಭ ಅಶುಭ ಭಾವಗಳಿಗನುಸಾರವಾಗಿ ಸುಖ ದುಃಖವನ್ನುಂಟುಮಾಡುವ ಕರ್ಮದ ಬುತ್ತಿಯನ್ನು ತನ್ನೊಡನೆ ಮುಂದಿನ ಭವಕ್ಕೆ ಕಟ್ಟಿಕೊಳ್ಳುವನು.

❖ ❖ ❖

ಶುಭಾಶುಭ ಕರ್ಮಗಳ ರೂಪವನ್ನು ಪಡೆದ ಪುದ್ಗಲಪರಮಾಣು ಅದಕ್ಕನುಸಾರವಾಗಿ ದೇಹ, ರೂಪಗಳನ್ನು ಪಡೆದು ಭವದಿಂದ ಭವಕ್ಕೆ ಬೇರೆ ಬೇರೆ ಪರ್ಯಾಯಗಳಲ್ಲಿ ಆತ್ಮನನ್ನು ತೊಳಲಿಸುತ್ತಿರುವುದು.

## ಅನೇಕಾಂತವಾದ

ಏಕಾಂತವಾದದಿಂದ ಲೋಕದ ವ್ಯವಹಾರವು ಸುಗಮವಾಗಿ ಸಾಗುವುದಕ್ಕೆ

ಸಾಧ್ಯವೇ ಇಲ್ಲ. ವಿಶ್ವದ ವಹಿವಾಟವೆಲ್ಲವನ್ನೂ ಸುಸೂತ್ರವಾಗಿ ನಡೆಸುವ ಗುರುವಾಗಿರುವ ಅನೇಕಾಂತವಾದಕ್ಕೆ ನಮನಗಳು.

❖ ❖ ❖

ದ್ರವ್ಯ ಎನ್ನುವುದು ಗುಣಗಳ ಸಮೂಹವಾಗಿರುವುದು. ಗುಣಗಳು ವಸ್ತುವನ್ನು ಆಶ್ರಯಿಸಿರುವುದು. ವಸ್ತುವಿನ ಪರ್ಯಾಯಗಳು ದ್ರವ್ಯ ಮತ್ತು ಗುಣವನ್ನವಲಂಬಿಸಿರುವುದು. ಅದರಿಂದ ದ್ರವ್ಯ, ಗುಣ, ಪರ್ಯಾಯಗಳು ಪರಸ್ಪರ ಅವಿನಾಭಾವದಿಂದ ಇರುವುವು.

❖ ❖ ❖

ಪರಮ ಚೈತನ್ಯ ಸ್ವರೂಪಿಯಾದ ನಾನು ಎಂದೂ ಜಡ ಪರವಸ್ತುವಾಗುವುದಿಲ್ಲ ಮತ್ತು ಪರವಸ್ತುಗಳು ಎಂದೂ ನನ್ನ ಸ್ವರೂಪವನ್ನು ಪಡೆಯಲಾರವು. ನಾನೊಬ್ಬನೆ. ಎಂದೆಂದಿಗೂ ಏಕಾಂಗಿ. ಜ್ಞಾನವೇ ನನ್ನ ರೂಪು ಎಂದು ಧ್ಯಾನಿಸಿದಾಗ ಆತ್ಮದರ್ಶನ !

❖ ❖ ❖

ಹೇಗೆ ಭಾಗ್ಯಹೀನನಿಗೆ ದಿವ್ಯರತ್ನದ ಪ್ರಾಪ್ತಿಯಾಗಲಾರದೋ ಹಾಗೆಯೇ ತ್ರಿಕಾಲೀ ಶುದ್ಧ ಶಾಶ್ವತ ಆತ್ಮನ ಅನುಸಂಧಾನ ಶುದ್ಧಾತ್ಮನ ಸಂವೇದನೆ ಆಸನ್ನ ಭವ್ಯನಲ್ಲದ ಕರ್ಮಕ್ಷಯವಿಲ್ಲದ ನಿರ್ಭಾಗ್ಯನಿಗೆ ಆಗಲಾರದು.

❖ ❖ ❖

ದೃಢ ಚಿತ್ತದಿಂದ ನಿರ್ಭೀತನಾದ ಧೀರಯೋಗಿ ಪರೀಷಹಗಳಿಂದ ಉಂಟಾಗುವ ಉಪಟಳಗಳ ಕೋಟಲೆಗೆ ಅಂಜುವುದಿಲ್ಲ. ಸೂಕ್ಷ್ಮಾತಿಸೂಕ್ಷ್ಮ ಆಮಿಷಗಳಿಗೂ ಸೋಲುವುದಿಲ್ಲ. ಅಮರ್ತ್ಯ ಮಾಯಾಜಾಲ ಕೂಡ ಅವನನ್ನು ಮುಸುಕಲಾರದು.

❖ ❖ ❖

ಬಹಳ ಕಾಲದಿಂದ ಸಂಗ್ರಹಿಸಿದ ಕಟ್ಟಿಗೆಯರಾಶಿ ಬೆಂಕಿಯ ಸಂಪರ್ಕದಿಂದ

ಕೆಲವೇ ನಿಮಿಷಗಳಲ್ಲಿ ಸುಟ್ಟುಹೋಗುವಂತೆ ಭವಭವಗಳ ಕರ್ಮರಾಶಿಯು ಧ್ಯಾನಾಗ್ನಿಯಿಂದ ಕ್ಷಣದಲ್ಲಿ ಭಸ್ಮವಾಗುವುದು.

❖ ❖ ❖

ಹುಟ್ಟಿದೊಡನೆಯೇ ಸಾವಿನಸ್ಪೃಷ್ಟಿ, ಯೌವನ ಏರಿದಂತೆ ವೃದ್ಧಾಪ್ಯ ಸನ್ನಿಹಿತ, ಸಿರಿಸಂಗ್ರಹವಾದ ಕೂಡಲೇ ನಷ್ಟವಾಗುವ ಭಯ- ಹೀಗಿರುವಾಗ ಸುಖವೆಲ್ಲಿ? ನೆಮ್ಮದಿಯನ್ನು ಪಡೆಯಬೇಕಾದರೆ ಮೋಹವೆಂಬ ಮಹಾವೈರಿಯನ್ನು ಗೆಲ್ಲಬೇಕು.

❖ ❖ ❖

ಧನ ಕನಕ ಬಂಧು ಬಳಗ ನನ್ನವರು ನನ್ನ ಸುಖ ದುಃಖದಲ್ಲಿ ಇವರು ಭಾಗಿಗಳು ಎಂಬುದು ಅಜ್ಞಾನ. ಈ ಭವಸಾಗರದಲ್ಲಿ ಯಾರಿಗೆ ಯಾರೂ ರಕ್ಷಕರಿಲ್ಲ. ಇಲ್ಲಿ ಮರೆಹೊಗಲು ಧರ್ಮ ಒಂದೇ ಶರಣು.

❖ ❖ ❖

ಈ ದುಸ್ತರವಾದ ಸಂಸಾರ ಸಾಗರವನ್ನು ದಾಟಬೇಕಾದರೆ ರತ್ನತ್ರಯಗಳೆಂಬ ದಿವ್ಯ ನೌಕೆಯೊಂದೇ ಸಾಧನ. ದರ್ಶನ ಜ್ಞಾನ ಚಾರಿತ್ರಗಳಿಂದ ಕೂಡಿದವರ ಆರಾಧನೆಯೇ ಸಾಧನವಾಗಬಲ್ಲುದು.

❖ ❖ ❖

ಪರ್ಯಾಯವಿಲ್ಲದೆ ದ್ರವ್ಯವಿಲ್ಲ. ದ್ರವ್ಯವಿಲ್ಲದೆ ಪರ್ಯಾಯವಿಲ್ಲ. ಗುಣವಿಲ್ಲದೆ ದ್ರವ್ಯವಿಲ್ಲ. ಆದರಿಂದ ಸೃಷ್ಟಿ ಸ್ಥಿತಿ ಲಯಗಳು ದ್ರವ್ಯವನ್ನು ಗುರುತಿಸುವ ಲಕ್ಷಣಗಳಾಗಿವೆ.

❖ ❖ ❖

ನಾಶವಿಲ್ಲದೆ ಸೃಷ್ಟಿಯಿಲ್ಲ, ಸೃಷ್ಟಿಯಿಲ್ಲದೆ ನಾಶವಿಲ್ಲ ಎಂಬುದು ನಿರ್ವಿವಾದ. ಆದರೆ ಧ್ರುವವಾದ ದ್ರವ್ಯವಿಲ್ಲದೆ ಸೃಷ್ಟಿ ಸ್ಥಿತಿ ಲಯಗಳು ಹೇಗೆ ಆದೀತು?

❖ ❖ ❖

ದ್ರವ್ಯವನ್ನು ಪರ್ಯಾಯ ದೃಷ್ಟಿಯಲ್ಲಿ ನೋಡಿದಾಗ ಹುಟ್ಟು ಸಾವು ಎಂಬ ವಿಪರ್ಯಾಸ ಕಾಣುವುದು. ಶಾಶ್ವತ ದ್ರವ್ಯದೃಷ್ಟಿಯಿಂದ ನೋಡಿದಾಗ ಹುಟ್ಟು ಸಾವು ಕೇವಲ ಆಭಾಸ.

❖ ❖ ❖

ಒಬ್ಬನೆ ಮನುಷ್ಯ ತಂದೆ, ಮಗ, ಅಣ್ಣ, ತಮ್ಮ, ಗಂಡ, ಮೊದಲಾದ ಹಲವು ಸಂಬಂಧಗಳನ್ನು ನಿರ್ವಹಿಸುವಂತೆ ಸವಿಕಲ್ಪದಿಂದ ಹಲವುರೂಪ, ನಿರ್ವಿಕಲ್ಪದಿಂದ ಒಂದೆ ನಿಶ್ಚಯರೂಪವಾಗಿರುವುದು.

❖ ❖ ❖

ಹಾಲು ನೀರು ಬೆರೆತ ಮಿಶ್ರಣವನ್ನು ಹಾಲೆನ್ನಬೇಕೋ ನೀರೆನ್ನಬೇಕೋ ? ಹೀಗೆ ವಿರುದ್ಧ ಧರ್ಮವಸ್ತುಗಳು ಅನ್ಯೋನ್ಯಭಾವದಿಂದ ಬೆರೆತಾಗ ಅವನ್ನು ವಿಭಜಿಸಲು ವಿಶೇಷ ಜ್ಞಾನ ಬೇಕು.

## ಜ್ಞಾನ

ತತ್ತ್ವಾರ್ಥದಲ್ಲಿ ಶಂಕೆ ಅನುಮಾನವಿಲ್ಲದ ಜ್ಞಾನಿ ಸ್ಯಾದ್ವಾದವನ್ನು ಅನುಸರಿಸಿ ಸಮತೆಯನ್ನು ಬಿಡದೆ ಧರ್ಮವನ್ನು ಉಪದೇಶಿಸಬೇಕು.

❖ ❖ ❖

ಜ್ಞಾನವು ಐದು ಬಗೆಯಾಗಿದೆ. ಅವು ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಾಯ ಜ್ಞಾನ ಮತ್ತು ಸರ್ವೋತ್ಕೃಷ್ಟವಾದ ಕೇವಲಜ್ಞಾನ. ಮೊದಲ ನಾಲ್ಕು ಜ್ಞಾನಗಳು ಕ್ಷಾಯೋಪಶಮಿಕ ಜ್ಞಾನಗಳಾದರೆ ಕೊನೆಯ ಕೇವಲಜ್ಞಾನವು ಕ್ಷಾಯಿಕ ಜ್ಞಾನವಾಗಿದೆ.

❖ ❖ ❖

ಶಬ್ದಗಳ ಮೂಲಕ ಆಗುವ ಜ್ಞಾನ ಶ್ರುತಜ್ಞಾನ. ಈ ಶ್ರುತಜ್ಞಾನಕ್ಕೆ ಮತಿಜ್ಞಾನ

ಪೂರಕ. ಮನ ಮತ್ತು ಇಂದ್ರಿಯಗಳ ಸಹಾಯದಿಂದ ಸಂಪಾದಿಸುವ ಜ್ಞಾನ ಮತಿ ಮತ್ತು ಶ್ರುತಜ್ಞಾನ. ಮತಿಜ್ಞಾನದಿಂದ ಶ್ರುತಜ್ಞಾನವೇ ಹೊರತು ಶ್ರುತಜ್ಞಾನದಿಂದ ಮತಿಜ್ಞಾನವಲ್ಲ.

❖ ❖ ❖

ಕ್ಷೇತ್ರ ಮತ್ತು ಕಾಲಗಳ ಪರಿಮಿತಿಯೊಳಗೆ ಅರಿಯುವುದು ಅವಧಿಜ್ಞಾನ. ಪರಿಧಿಯೊಳಗಿನ ಪುದ್ಗಲಗಳನ್ನೆಲ್ಲಾ ತಿಳಿಯುವುದು. ಇದನ್ನು ಸೀಮಾಜ್ಞಾನ ಎಂದೂ ಕರೆಯುವರು.

❖ ❖ ❖

ಪರರ ಮನಸ್ಸನ್ನು ಹೊಕ್ಕು ಚಿಂತಿತ ಅಚಿಂತಿತ ಅರ್ಧಚಿಂತಿತ ಭಾವನೆಗಳನ್ನೆಲ್ಲ ತಿಳಿಯುವ ಪರೇಂಗಿತ ಜ್ಞಾನವನ್ನು ಮನಃಪರ್ಯಾಯ ಜ್ಞಾನ ಎನ್ನುವರು.

❖ ❖ ❖

ಸರ್ವೋತ್ಕೃಷ್ಟ, ಶುದ್ಧ, ಸ್ವಸಂಪೂರ್ಣ, ಅಸಾಧಾರಣ ಅತೀಂದ್ರಿಯ ಜ್ಞಾನವೆಂದರೆ ಕೇವಲಜ್ಞಾನ. ಇಂತಹ ಅಸೀಮಜ್ಞಾನವನ್ನು ಪಡೆಯುವುದರಿಂದ ಭೂತ ಭವಿಷ್ಯತ್ ಮತ್ತು ವರ್ತಮಾನದ ಎಲ್ಲ ವಿಚಾರಗಳನ್ನು ಏಕಕಾಲದಲ್ಲಿ ತಿಳಿಯುವ ಜ್ಞಾನ ಸಾಮರ್ಥ್ಯ ಒದಗುತ್ತದೆ.

❖ ❖ ❖

ವಸ್ತುವಿನ ನಿಜವಾದ ಮತ್ತು ಸರಿಯಾದ ಸ್ವರೂಪವನ್ನು ತಿಳಿಯುವ ಜ್ಞಾನವನ್ನು ಪ್ರಮಾಣವೆನ್ನುವರು. ಈ ಜ್ಞಾನ ಪ್ರತ್ಯಕ್ಷ ಮತ್ತು ಪರೋಕ್ಷ ಎಂದು ಎರಡು ವಿಧವಾಗಿದೆ. ಇಂದ್ರಿಯಗಳ ಅವಲಂಬನದಿಂದಾಗುವ ಜ್ಞಾನ ಪರೋಕ್ಷಜ್ಞಾನ. ಇಂದ್ರಿಯಾತೀತವಾದುದು ಪ್ರತ್ಯಕ್ಷ ಜ್ಞಾನ.

# ದಿವ್ಯಧ್ವನಿ

ಹಿಂದೆಂದು ದೊರಕದಿಪ ಅಮೃತಕ್ಕೆ ಸಮನಾದ ಜಿನವರವಾಣಿಯನ್ನು ಅರಿಯುವ ಅವಕಾಶ ದೊರೆತ ಮೇಲೆ ಅದರಿಂದ ಸುಗತಿಯ ಸನ್ಮಾರ್ಗವನ್ನು ಹಿಡಿದ ಜೀವಕ್ಕೆ ಮರಣಭೀತಿಯುಂಟೆ ?

❈ ❈ ❈

ಆತ್ಮನು ಜ್ಞಾನ ಪ್ರಮಾಣವಾಗಿದ್ದಾನೆ. ಜ್ಞಾನವು ಜ್ಞೇಯ ಪ್ರಮಾಣವಾಗಿದೆ. ಜ್ಞೇಯಕ್ಕೆ ಇಡೀ ಲೋಕಾಲೋಕವು ವಸ್ತುವಾಗಿದೆ. ಅದರಿಂದ ಜ್ಞಾನವು ಸರ್ವಾಂತರ್ಯಾಮಿಯಾಗಿದೆ.

❈ ❈ ❈

ಕೇವಲಜ್ಞಾನವನ್ನು ಪಡೆದ ಸರ್ವಜ್ಞರಿಗೆ ಅತೀಂದ್ರಿಯ ಆನಂದದ ಅನುಭವ ಆಗುತ್ತದೆ. ಆ ಸಮಯದಲ್ಲಿ ಶರೀರ ಸಂಬಂಧವಾದ ದುಃಖ ಸುಖಗಳು ಅನುಭವಕ್ಕೆ ಬರುವುದಿಲ್ಲ. ಎಂದರೆ ಅತೀಂದ್ರಿಯ ಸುಖ ಸಂವೇದನೆಯನ್ನು ಪಡೆದ ಶುದ್ಧಾತ್ಮನಿಗೆ ಶಾರೀರಿಕ ಪೀಡೆಗಳ ಅನುಭವವಾಗುವುದಿಲ್ಲ.

❈ ❈ ❈

ಆತ್ಮನು ಜ್ಞಾನದ ಮೊತ್ತವಾಗಿದ್ದಾನೆ. ಆತ್ಮನಲ್ಲಿ ಅಥವಾ ಜೀವನಲ್ಲಿ ಹೊರತುಪಡಿಸಿ ಬೇರೆ ಯಾವ ದ್ರವ್ಯದಲ್ಲಿಯೂ ಜ್ಞಾನವಿಲ್ಲ. ಅದರಿಂದ ಜ್ಞಾನವೇ ಆತ್ಮನ ಸ್ವರೂಪವಾಗಿದೆ.

❈ ❈ ❈

ಆತ್ಮನು ಜ್ಞಾನಸ್ವಭಾವಿ. ಲೋಕದ ಎಲ್ಲ ಪದಾರ್ಥಗಳು ಆತ್ಮನ ಜ್ಞಾನಕ್ಕೆ ಜ್ಞೇಯ. ಎಂದರೆ ತಿಳಿಯಲರ್ಹವಾದ ವಸ್ತುಗಳಾಗಿವೆಯೇ ಹೊರತು ಪರಸ್ಪರ ಪರಿವರ್ತಿತವಾಗುವುದಿಲ್ಲ. ಉದಾಹರಣೆಗೆ ಕಣ್ಣು ಸಕಲವಸ್ತುಗಳನ್ನು ನೋಡುವುದು. ಆದರೆ ಕಣ್ಣು ವಸ್ತುವಾಗಿಯಾಗಲಿ ವಸ್ತು ಕಣ್ಣಾಗಿಯಾಗಲಿ ಪರಿಣಮಿಸುವುದು ಸಾಧ್ಯವಿಲ್ಲ.

ಯಾರು ಶ್ರುತಜ್ಞಾನದ ಮುಖಾಂತರ ಜ್ಞಾಯಕ (ಎಂದರೆ ತಿಳಿಯುವ ಸಾಮರ್ಥ್ಯವಿರುವ) ಆತ್ಮನನ್ನು ತಿಳಿಯುತ್ತಾರೋ ಅವರನ್ನು ಶ್ರುತಕೇವಲಿ ಎನ್ನುತ್ತಾರೆ.

❖ ❖ ❖

ಆತ್ಮನು ಅದ್ಭುತ ಜ್ಞಾನಶಕ್ತಿ ಮತ್ತು ದ್ರವ್ಯಗಳ ಜ್ಞೇಯಶಕ್ತಿಗಳಿಂದ ಕೇವಲ ಜ್ಞಾನದಲ್ಲಿ ಸಮಸ್ತವಸ್ತುಗಳ ನಷ್ಟ, ಉತ್ಪನ್ನ, ಅನುತ್ಪನ್ನ ಅಥವ ಭೂತ, ವರ್ತಮಾನ ಮತ್ತು ಭವಿಷ್ಯತ್‌ಕಾಲದ ಪರ್ಯಾಯಗಳು ಗೋಚರವಾಗುತ್ತವೆ.

❖ ❖ ❖

ಯಾರ ಜ್ಞಾನದೃಷ್ಟಿಗೆ ಕ್ಷಣಿಕ, ಶಾಶ್ವತ, ಮೂರ್ತ, ಅಮೂರ್ತ ಮೊದಲಾದ ವಿರುದ್ಧಸ್ವಭಾವದ ಅಸಮಾನ ವಸ್ತುಗಳೂ ಕೂಡ ಏಕಕಾಲದಲ್ಲಿ ಅನುಭವಕ್ಕೆ ಬರುವುದೋ ಅದನ್ನು ಕ್ಷಾಯಿಕಜ್ಞಾನ ಎನ್ನುವರು.

❖ ❖ ❖

ಆತ್ಮನು ಜ್ಞಾನದ ಅಖಂಡಸ್ವರೂಪನಾಗಿದ್ದಾನೆ. ಒಂದುವೇಳೆ ಆತ್ಮನ ಜ್ಞಾನವು ಪದಾರ್ಥಗಳ ಅವಲಂಬನೆಯಿಂದ ಉಂಟಾಗುತ್ತಿದ್ದರೆ ಆ ಜ್ಞಾನವೂ ಪದಾರ್ಥಗಳ ಹಾಗೆ ನಾಶಶೀಲವಾಗಿರುತ್ತಿತ್ತು ಮತ್ತು ಸರ್ವಗತ ವಾಗಿರುತ್ತಿರಲಿಲ್ಲ.

❖ ❖ ❖

ಆತ್ಮನು ಪದಾರ್ಥಗಳನ್ನು ತಿಳಿದುಕೊಳ್ಳುತ್ತಿದ್ದರೂ ಸ್ವರೂಪಬಿಟ್ಟು ಪರಿಣಮಿಸುವುದಿಲ್ಲ, ಪರಪದಾರ್ಥವನ್ನು ಗ್ರಹಣ ಮಾಡುವುದಿಲ್ಲ. ತಾನು ಆ ಪದಾರ್ಥಗಳ ರೂಪವನ್ನು ಸ್ವೀಕರಿಸುವುದಿಲ್ಲ ಆದರಿಂದ ಆತ್ಮನನ್ನು ಅಬಂಧಕ ಎಂದು ಹೇಳಿದ್ದಾರೆ.

❖ ❖ ❖

ದೇವ ಗುರು ಮತ್ತು ಶಾಸ್ತ್ರದ ಪೂಜೆಯಲ್ಲಿ, ದಾನ ಸೌಶೀಲ್ಯ ಮತ್ತು ಉಪವಾಸದಲ್ಲಿ ಲೀನನಾದ ಆತ್ಮನು ಶುಭೋಪಯೋಗದಲ್ಲಿ ತೊಡಗಿರುತ್ತಾನೆ.

ಪುಣ್ಯಫಲ ರೂಪದ ದೇವಾದಿ ಗತಿಗಳಲ್ಲಿ ಪುಣ್ಯವಿದ್ದರೂ ವಿಷಯಾದಿ ಬಯಕೆಗಳಿಗೆ ಕಾರಣವಾದುದರಿಂದ ದುಃಖಕ್ಕೆ ಮೂಲವಾಗಿದೆ.

❖ ❖ ❖

ಯಾವ ಸುಖವು ಇಂದ್ರಿಯಗಳಿಂದ ಒದಗುತ್ತದೆ ಅದು ಪರವಸ್ತುವಿನಿಂದ ಅವಲಂಬಿತವಾಗಿರುವುದರಿಂದ ನಾಶಶೀಲವಾಗಿದೆ, ಬಂಧಕಾರಣವಾಗಿದೆ. ಸುಖಾಭಾಸವಾಗಿದೆ ಮತ್ತು ದುಃಖಕ್ಕೆ ಕಾರಣವಾಗಿದೆ.

❖ ❖ ❖

ಯಾವ ಜೀವನು ಪಾಪ ಪುಣ್ಯಗಳೆರಡೂ ಸಮಾನವಾದ ಬಂಧನಗಳೆಂದು ಭಾವಿಸುವುದಿಲ್ಲ ಅವನು ಅಪಾರ ಸಂಸಾರ ಸಾಗರದಲ್ಲಿ ಅಪರಿಮಿತ ಕಾಲ ತೊಳಲುತ್ತಾನೆ.

❖ ❖ ❖

ಪಾಪ ಕರ್ಮಗಳನ್ನು ಬಿಟ್ಟು ಶುಭ ಚಾರಿತ್ರವನ್ನು ಮೈಗೂಡಿಸಿಕೊಂಡರೂ, ಜೀವ ಮೋಹಶತ್ರುವನ್ನು ಜಯಿಸುವವರೆಗೆ ಶುದ್ಧನಾಗಲು ಸಾಧ್ಯವಿಲ್ಲ.

❖ ❖ ❖

ಅರಹಂತ ಭಗವಂತರುಗಳೆಲ್ಲರೂ ರತ್ನತ್ರಯಾರಾಧನೆಯ ಮಾರ್ಗದಲ್ಲಿ ನಡೆದೇ ಮುಕ್ತರಾಗಿದ್ದಾರೆ ಮತ್ತು ಅದೇ ಮಾರ್ಗವನ್ನು ಉಪದೇಶಿಸಿದ್ದಾರೆ.

❖ ❖ ❖

ಪರಪದಾರ್ಥಗಳ ಪರವಾದ ಪ್ರೀತಿ ಅಪ್ರೀತಿ ಮತ್ತು ಪ್ರಾಣಿಗಳ, ಬಂಧುಗಳ ಪರವಾದ ಸ್ನೇಹ ಕರುಣೆ ದ್ವೇಷ ಇವೆಲ್ಲವೂ ಮೋಹದ ಪರಿಣಾಮವಾಗಿದೆ.

❖ ❖ ❖

ಯಾರು ಜ್ಞಾನ ಚೇತನಮಯವಾದ 'ತನ್ನನ್ನು' ಪರ ಜಡವಸ್ತುಗಳಿಂದ ಪ್ರತ್ಯೇಕ ಎಂದು ನೋಡುತ್ತಾನೋ ಅವನು ಮೋಹವನ್ನು ಗೆಲ್ಲುತ್ತಾನೆ.

❖ ❖ ❖

ಯಾವನು ಆಗಮೋಕ್ತ ಉಪದೇಶದಿಂದ ಸ್ವ ಮತ್ತು ಪರವಸ್ತುಗಳ ವಿಶ್ಲೇಷಣೆ ಮಾಡುವುದಿಲ್ಲ ಅವನು ಶ್ರಮಣನಲ್ಲ.

❁ ❁ ❁

ಯಾರು ಆಗಮದಲ್ಲಿ ಕುಶಲನಾಗಿದ್ದಾರೆ, ಯಾರಿಗೆ ಮೋಹಕಷಾಯ ಕ್ಷೀಣವಾಗಿದೆ, ಯಾರು ವೀತರಾಗಚಾರಿತ್ರವನ್ನು ಎಂದರೆ ರಾಗ ದ್ವೇಷರಹಿತ ನಡೆಯನ್ನು ಮೈಯ್ಗೂಡಿಸಿಕೊಂಡಿದ್ದಾರೆ ಅಂತಹ ಮಹಾತ್ಮರಿಗೆ ಧರ್ಮ ಸಿದ್ಧಿಸುತ್ತದೆ.

❁ ❁ ❁

ಯಾವ ಜೀವರು ಪರವಸ್ತುಗಳಲ್ಲಿ ಪರ್ಯಾಯಗಳಲ್ಲಿ ಲೀನರಾಗಿದ್ದಾರೆ ಅವರನ್ನು ಪರಸಮಯಿಗಳೆಂದೂ ಯಾರು ದ್ರವ್ಯರೂಪಿ ಸ್ವ ಸ್ವರೂಪದಲ್ಲಿ ಲೀನರಾಗಿದ್ದಾರೆ ಅವರನ್ನು ಸ್ವಸಮಯರೆಂದೂ ಹೇಳುತ್ತಾರೆ.

❁ ❁ ❁

ಕರ್ಮವು ತನ್ನ ಸ್ವಭಾವದಿಂದ ಜೀವ ಸ್ವಭಾವದ ಪರಾಭವಮಾಡಿ ಮನುಷ್ಯ ತಿರ್ಯಂಚ ನಾರಕ ಅಥವಾ ದೇವ ಪರ್ಯಾಯಗಳನ್ನು ಸಂಯೋಜಿಸುತ್ತದೆ.

❁ ❁ ❁

ರಾಗದ್ವೇಷಗಳೇ ಕರ್ಮವೆಂಬ ಮರದ ಬೀಜ. ಕರ್ಮಕ್ಕೆ ಮೋಹವೇ ಮೂಲ. ಮೋಹವೇ ಜನ್ಮ ಮರಣಕ್ಕೆ ಮೂಲ. ಜನನ ಮರಣವೇ ದುಃಖದ ತಾಯಿ ಬೇರು.

❁ ❁ ❁

ಭವಸಾಗರದ ಸಿಕ್ಕು ಸುಳಿಗಳಲ್ಲಿ ಸಿಕ್ಕಿ ದಡ ಕಾಣಬಯಸುವ ಯಾವ ಜೀವವನ್ನಾದರೂ ಪಾರಗಾಣಿಸುವ ನೌಕೆ, ಎಂದರೆ ಸರ್ವ ಜೀವ ಹಿತಕಾರಿಯಾದ ಜಿನೇಂದ್ರ ಭಗವಾನರ ಶಾಸನವೇ ಆಗಿದೆ.

❁ ❁ ❁

ಅರಹಂತರ ಉಪದೇಶವನ್ನು ಅರಿತು ಗಣಧರರು ಅರ್ಥೈಸಿದರು ಆಚಾರ್ಯರು ಆ ಶ್ರುತಕ್ಕೆ ಶಾಶ್ವತರೂಪವನ್ನು ಕೊಟ್ಟು ಶ್ರುತಸಾಗರವನ್ನು ತುಂಬಿದರು ಅವರೆಲ್ಲರಿಗೂ ಭಕ್ತಿಯಿಂದ ತಲೆಬಾಗುತ್ತೇನೆ.

❖ ❖ ❖

ಜಾಗೃತನಾದ ಭವ್ಯನಿಗೆ ಎಂದೂ ಜ್ಞಾನವೇ ಶರಣು, ದೃಢಶ್ರದ್ಧೆಯೇ ಶರಣು, ಸಚ್ಚಾರಿತ್ರವೇ ಶರಣು, ತಪ ಸಂಯಮಗಳೇ ಶರಣು, ಸಿದ್ಧಿಯನ್ನು ಸಾಧಿಸಿದ ಭಗವಾನ್ ಮಹಾವೀರನೇ ಶರಣು.

❖ ❖ ❖

ಮೃಗಗಳಲ್ಲಿ ಸಿಂಹವೂ ಹಸ್ತಿಗಳಲ್ಲಿ ಐರಾವತವೂ ನದಿಗಳಲ್ಲಿ ಗಂಗೆಯೂ ಪಕ್ಷಿಗಳಲ್ಲಿ ಗರುಡನೂ ಶ್ರೇಷ್ಠವಾಗಿರುವ ಹಾಗೆ ಮುಕ್ತರಾದವರಲ್ಲಿ ಮಹಾವೀರನು ಶ್ರೇಷ್ಠನಾಗಿರುವನು.

❖ ❖ ❖

ಜಿನರ ಸರ್ವಾಂಗದಿಂದ ಓಂಕಾರ ರೂಪದಿಂದ ಉದ್ಭವಿಸಿದ ಜಿನವಾಣಿ ಅನುಪಮವಾದುದು. ಒಂದು ಹೇಳಿಕೆಗೆ ಮತ್ತೊಂದು ವಿರೋಧವಾಗದುದು. ಸತ್ಯಸ್ವರೂಪದ ಸಾರಸಂಗ್ರಹ. ಭವ್ಯರು ಅದರ ಅಂತರಾರ್ಥವನ್ನು ತಿಳಿದು ಪುನೀತರಾಗುವರು.